# ಸರ್ವ ಸದಸ್ಯರ ಗಮನಕ್ಕೆ


## ಕನ್ನಡ ಸಾಹಿತ್ಯ ಪರಿಷತ್ತು

**ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮**


---

**ಕನ್ನಡ ಸಾಹಿತ್ಯ ಪರಿಷತ್ತಿನ ಸಕಲ ಸದಸ್ಯರ**

## ವಿಶೇಷ ಸಭೆ

ಕರ್ನಾಟಕ ಸೊಸೈಟಿ ನೋಂದಣಿ ಕಾಯ್ದೆ ೧೯೬೦ ಕಲಂ ೧೦ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ೩೩ನೇ ನಿಬಂಧನೆ ಮೇರೆಗೆ

ಈ **ನೋಟೀಸ್** ನೀಡಲಾಗಿದೆ.

**ದಿನಾಂಕ ೧೫-೦೩-೨೦೧೮ ಗುರುವಾರ, ಬೆಳಿಗ್ಗೆ ೧೧.೦೦ ಗಂಟೆಗೆ**

**ಉಡುಪಿ ಜಿಲ್ಲೆ / ತಾಲ್ಲೂಕು, ಕುಂದಾಪುರ ಸಮೀಪದ ಕೋಟ ಗ್ರಾಮದ**

**ಡಾ. ಶಿವರಾಮ ಕಾರಂತ ಥೀಮ್ ಪಾರ್ಕ್‌ನಲ್ಲಿ**

ಪರಿಷತ್ತಿನ ಅಧ್ಯಕ್ಷರಾದ

**ಡಾ. ಮನು ಬಳಿಗಾರ್** ಅವರ

ಅಧ್ಯಕ್ಷತೆಯಲ್ಲಿ ಪರಿಷತ್ತಿನ ಸಕಲ ಸದಸ್ಯರ ವಿಶೇಷ ಸಭೆಯು ನಡೆಯುತ್ತದೆ.

ತಾವು ದಯವಿಟ್ಟು ಆಗಮಿಸಬೇಕಾಗಿ ಪ್ರಾರ್ಥನೆ.

**ಡಾ. ರಾಜಶೇಖರ ಹತಗುಂದಿ**
ಗೌರವ ಕಾರ್ಯದರ್ಶಿ

**ಶ್ರೀ ವ.ಚ. ಚನ್ನೇಗೌಡ**
ಗೌರವ ಕಾರ್ಯದರ್ಶಿ

**ಶ್ರೀ ಪಿ. ಮಲ್ಲಿಕಾರ್ಜುನಪ್ಪ**
ಗೌರವ ಕೋಶಾಧ್ಯಕ್ಷರು

---

**ಕಾರ್ಯಸೂಚಿ**

ಪರಿಷತ್ತಿನ ನಿಬಂಧನೆ ತಿದ್ದುಪಡಿ ಸಲಹಾ ಸಮಿತಿ ಮತ್ತು ಕಾರ್ಯಕಾರಿ ಸಮಿತಿ ಒಪ್ಪಿಸಿರುವ ಈಗಿನ ನಿಬಂಧನೆಗಳ ತಿದ್ದುಪಡಿಗಳ ಪರಿಶೀಲನೆ ಮತ್ತು ಅಂಗೀಕಾರ.
(ನಿಬಂಧನೆ ತಿದ್ದುಪಡಿಗಳ ಕರಡನ್ನು ಇದರೊಡನೆ ಇರಿಸಿದೆ)

ಸೂಚಕರು : **ಶ್ರೀ ನೀಲಾವರ ಸುರೇಂದ್ರ ಅಡಿಗ**
ಅಧ್ಯಕ್ಷರು, ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು

ಅನುಮೋದಕರು : **ಶ್ರೀ ಮಾಯಣ್ಣ**
ಅಧ್ಯಕ್ಷರು, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು

---

**ವಿಶೇಷ ಸೂಚನೆ :**

೧. ನಿಬಂಧನೆ ತಿದ್ದುಪಡಿ ಸಲಹಾಸಮಿತಿಯು ಈ ಕೆಳಕಂಡ ದಿನಾಂಕಗಳಲ್ಲಿ ಸಭೆ ಸೇರಿದೆ.

೧) ೭-೫-೨೦೧೬ ೨) ೧೦-೮-೨೦೧೬ ೩) ೧೭-೦೯-೨೦೧೬
೪) ೧೨-೧-೨೦೧೭ ೫) ೧೨-೦೫-೨೦೧೭

೨. ನಿಬಂಧನೆ ತಿದ್ದುಪಡಿ ಸಲಹಾ ಸಮಿತಿಯ ಶಿಫಾರಸ್ಸುಗಳನ್ನು ದಿನಾಂಕ ೦೫-೦೬-೨೦೧೭ ರಂದು ಸಭೆ ಸೇರಿದ್ದ ಪರಿಷತ್ತಿನ ಕಾರ್ಯಕಾರಿ ಸಮಿತಿಯು ಸರ್ವಾನುಮತದಿಂದ ಅಂಗೀಕರಿಸಿ ಹಾಗೂ ದಿನಾಂಕ ೨೨-೦೧-೨೦೧೮ ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕ್ರ.ಸಂ.೧೩ ಮತ್ತು ೧೪ ಕ್ಕೆ ತೆಗೆದುಕೊಂಡ ಒಮ್ಮತದ ನಿರ್ಣಯಗಳನ್ನು ಸಮಗ್ರವಾಗಿ ಪರಿಶೀಲಿಸಿ, ಸೂಕ್ತ ತಿದ್ದುಪಡಿಗಳನ್ನು ಮಾಡಿ ಅವುಗಳನ್ನು ಸಕಲ ಸದಸ್ಯರ ವಿಶೇಷ ಸಭೆಯ ಮುಂದೆ ಮಂಡಿಸಲು ಒಮ್ಮತದ ಒಪ್ಪಿಗೆ ನೀಡಿದೆ.

೩. ಸಭೆಗೆ ಬರುವ ಕ.ಸಾ.ಪ. ಸದಸ್ಯರು, ಪರಿಷತ್ತಿನ ಗುರುತಿನ ಚೀಟಿ ಅಥವಾ ಜನತಾ ಪ್ರಾತಿನಿಧ್ಯ ಕಾಯ್ದೆಯಲ್ಲಿ ಸೂಚಿಸಿರುವ ಯಾವುದಾದರೂ ಒಂದು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರುವುದು.

# ನಿಬಂಧನೆ ತಿದ್ದುಪಡಿಗಳ ಕರಡು

**ಚುನಾವಣಾ ಸುಧಾರಣಾ ಹಾಗೂ ನಿಬಂಧನೆ ತಿದ್ದುಪಡಿ ಸಲಹಾ ಸಮಿತಿಯು ದಿನಾಂಕ ೭-೫-೨೦೧೬, ೧೦-೮-೨೦೧೬, ೧೭-೧೯-೨೦೧೬, ೧೨-೧-೨೦೧೭ ಮತ್ತು ೧೨-೦೫-೨೦೧೭ ರಂದು ನಡೆದ ಸಭೆಗಳಲ್ಲಿ ಈ ಕೆಳಕಂಡಂತೆ ನಿಬಂಧನೆಗಳಿಗೆ ತಿದ್ದುಪಡಿ ಪ್ರಸ್ತಾಪಿಸಲಾಗಿದೆ. ಪ್ರಸ್ತಾವನೆಯನ್ನು ದಿನಾಂಕ ೦೫-೦೬-೨೦೧೭ ರಂದು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಹಾಗೂ ದಿನಾಂಕ ೨೨-೦೧-೨೦೧೮ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಒಮ್ಮತದಿಂದ ಒಪ್ಪಿಗೆ ನೀಡಲಾಗಿದೆ.**

| ಕ್ರಸಂ. | ಹಾಲಿ ಇರುವ ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ | ಕಾರಣ |
|---|---|---|---|
| ೧. | **ನಿಬಂಧನೆ -೭ : ಅಂಗರಚನೆ**<br>ಪರಿಷತ್ತಿನ ಉದ್ದೇಶಗಳನ್ನು ಅಂಗೀಕರಿಸಿ ಅದರೊಡನೆ ಸಹಕರಿಸಲು ಬದ್ಧರಾಗುವ ಕನ್ನಡ ಸಂಸ್ಥೆಗಳು ಮತ್ತು ೧೮ ವರ್ಷಗಳ ಮೇಲ್ಪಟ್ಟ ವಯಸ್ಸಿನ ಕನ್ನಡ ಓದು ಬರಹ ಬಲ್ಲ ಎಲ್ಲ ವ್ಯಕ್ತಿಗಳೂ ಸದಸ್ಯತ್ವವನ್ನು ಪಡೆಯಬಹುದು. | **ನಿಬಂಧನೆ -೭ : ಅಂಗರಚನೆ**<br>ಪರಿಷತ್ತಿನ ಉದ್ದೇಶಗಳನ್ನು ಅಂಗೀಕರಿಸಿ ಅದರೊಡನೆ ಸಹಕರಿಸಲು ಬದ್ಧರಾಗುವ ಕನ್ನಡ ಸಂಸ್ಥೆಗಳು ಮತ್ತು ೧೮ ವರ್ಷಗಳ ಮೇಲ್ಪಟ್ಟ ವಯಸ್ಸಿನ ಕನ್ನಡ ಓದು ಬರಹ ಬಲ್ಲ ಎಲ್ಲ ವ್ಯಕ್ತಿಗಳೂ ಸದಸ್ಯತ್ವವನ್ನು ಪಡೆಯಬಹುದು. | ಬದಲಾವಣೆ ಇರುವುದಿಲ್ಲ |
| | **ಸದಸ್ಯರಲ್ಲಿ ಈ ಕೆಳಕಂಡಂತೆ ವರ್ಗಗಳಿರತಕ್ಕದ್ದು**<br>ಅ) ಪೋಷಕರು ರೂ. ೧೦,೦೦೦<br>ಆ) ದಾತೃಗಳು ರೂ. ೫,೦೦೦<br>ಇ) ಆಜೀವ ಸದಸ್ಯರು ರೂ. ೨೫೦<br>ಈ) ವಾರ್ಷಿಕ ಸದಸ್ಯರು ರೂ. ೫೦<br>ಉ) ಪೋಷಕ ಸಂಸ್ಥೆಗಳು ರೂ. ೨೫,೦೦೦<br>ಊ) ದಾತೃ ಸಂಸ್ಥೆಗಳು ರೂ. ೧೦,೦೦೦<br>ಋ) ಆಜೀವ ಸಂಸ್ಥೆಗಳು ರೂ. ೨,೫೦೦<br>ೠ) ವಾರ್ಷಿಕ ಸದಸ್ಯ ಸಂಸ್ಥೆಗಳು ರೂ. ೨೫೦<br>ಎ) ಸದಸ್ಯರಾಗುವವರು ಸದಸ್ಯತ್ವ ಶುಲ್ಕದ ಜೊತೆಗೆ ೧೦-೦೦ (ಹತ್ತು) ರೂ. ಪ್ರವೇಶ ಶುಲ್ಕವನ್ನು ಕೊಡತಕ್ಕದ್ದು.<br>ಏ) ಸದಸ್ಯತ್ವವನ್ನು ಮುಂದುವರಿಸಿಕೊಳ್ಳದಿರುವ ವ್ಯಕ್ತಿಯು ಮತ್ತು ಸಂಸ್ಥೆಯು ಮರು ಪ್ರವೇಶಕ್ಕೆ ಹತ್ತು ರೂಪಾಯಿ ಪ್ರವೇಶ ಧನವನ್ನು ಕೊಡತಕ್ಕದ್ದು.<br>ಐ) ವಾರ್ಷಿಕ ಸದಸ್ಯರ ಶುಲ್ಕ ಹಾಗೂ ವಾರ್ಷಿಕ ಸದಸ್ಯ ಸಂಸ್ಥೆಗಳ ಶುಲ್ಕವನ್ನು ಹೊರತುಪಡಿಸಿ ಉಳಿದ ಎಲ್ಲ ವರ್ಗದ ಸದಸ್ಯತ್ವದ ಶುಲ್ಕವನ್ನು ಸ್ಥಾಯಿನಿಧಿಗೆ ಸೇರಿಸತಕ್ಕದ್ದು. ಸ್ಥಾಯಿನಿಧಿಯ ಹಣವನ್ನು ಯಾವ ಕಾರಣದಿಂದಲೂ ಸರ್ವ ಸದಸ್ಯರ ಸಭೆಯ ಅನುಮತಿ ಇಲ್ಲದೇ ಬಳಸತಕ್ಕದ್ದಲ್ಲ. ಈ ನಿಧಿಯಿಂದ ಬರುವ ಬಡ್ಡಿಯನ್ನು ಮಾತ್ರ ಪರಿಷತ್ತಿನ ಚಟುವಟಿಕೆಗಳಿಗೆ ಬಳಸತಕ್ಕದ್ದು. | **ಸದಸ್ಯರಲ್ಲಿ ಈ ಕೆಳಕಂಡಂತೆ ವರ್ಗಗಳಿರತಕ್ಕದ್ದು**<br>ಅ) ಪೋಷಕರು ರೂ. ೧೦,೦೦೦<br>ಆ) ದಾತೃಗಳು ರೂ. ೫,೦೦೦<br>ಇ) ಆಜೀವ ಸದಸ್ಯರು ರೂ. ೫೦೦<br>ಹಾಗೂ ಕನ್ನಡ ನುಡಿ ಚಂದಾದಾರರಿಗೆ ಶುಲ್ಕ ರೂ. ೫೦೦ ಒಟ್ಟು ರೂ. ೧೦೦೦<br>ಈ) ಪೋಷಕ ಸಂಸ್ಥೆಗಳು ರೂ. ೫೦,೦೦೦<br>ಉ) ದಾತೃ ಸಂಸ್ಥೆಗಳು ರೂ. ೨೦,೦೦೦<br>ಊ) ಆಜೀವ ಸಂಸ್ಥೆಗಳು ರೂ. ೫,೦೦೦<br>ಋ) ಮಹಾ ಪೋಷಕ ಸಂಸ್ಥೆಗಳು ರೂ. ೧,೦೦,೦೦೦<br><br>ಎ) ಮೇಲ್ಕಂಡ ಎಲ್ಲ ವರ್ಗದ ಸದಸ್ಯತ್ವದ ಶುಲ್ಕವನ್ನು ಸ್ಥಾಯಿನಿಧಿಗೆ ಸೇರಿಸತಕ್ಕದ್ದು. ಸ್ಥಾಯಿನಿಧಿಯ ಹಣವನ್ನು ಯಾವ ಕಾರಣ ದಿಂದಲೂ ಸರ್ವ ಸದಸ್ಯರ ಸಭೆಯ ಅನುಮತಿ ಇಲ್ಲದೇ ಬಳಸತಕ್ಕದ್ದಲ್ಲ. ಈ ನಿಧಿಯಿಂದ ಬರುವ ಬಡ್ಡಿಯನ್ನು ಮಾತ್ರ ಪರಿಷತ್ತಿನ ಚಟುವಟಿಕೆಗಳಿಗೆ ಬಳಸತಕ್ಕದ್ದು. | ಮುದ್ರಣ ಕಾಗದ ಬೆಲೆ ಹೆಚ್ಚುವರಿ, ಸಾಗಣಿಕೆ, ವಿದ್ಯುಚ್ಛಕ್ತಿ ಇತರೆ ಸಾಮಗ್ರಿಗಳ ಬೆಲೆ ಏರಿಕೆಯಿಂದ ಕನ್ನಡ ನುಡಿಯ ಶುಲ್ಕವನ್ನು ಹೆಚ್ಚಿಸಲಾಗಿದೆ. ಹಾಗೂ ಅಂಚೆ ವೆಚ್ಚವನ್ನು ಸಹ ಭರಿಸಬೇಕಾಗಿದೆ. ಅಂಚೆ ವೆಚ್ಚ ಕೂಡಾ ಮೊದಲಿಗಿಂತ ಹೆಚ್ಚಾಗಿದೆ.<br>ವಾರ್ಷಿಕ ಸದಸ್ಯರು ಹಾಗೂ ವಾರ್ಷಿಕ ಸದಸ್ಯ ಸಂಸ್ಥೆಗಳನ್ನು ಕೈಬಿಡಲಾಗಿದೆ.<br>ಎ ಮತ್ತು ಏ ಗಳನ್ನು ಕೈಬಿಡಲಾಗಿದೆ.<br>ವಾರ್ಷಿಕ ಸದಸ್ಯರು ಹಾಗೂ ವಾರ್ಷಿಕ ಸದಸ್ಯ ಸಂಸ್ಥೆಗಳನ್ನು ಕೈಬಿಡಲಾಗಿದೆ. |

| ಕ್ರ.ಸಂ. | ಹಾಲಿ ಇರುವ ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ | ಕಾರಣ |
|---|---|---|---|
| ೨. | ನಿಬಂಧನೆ –೮ : | ನಿಬಂಧನೆ –೮ : | |
| | ಅ) ಸದಸ್ಯರಾಗಿ ಸೇರಲು ಬಯಸುವ ವ್ಯಕ್ತಿ ಅಥವಾ ಸಂಸ್ಥೆಯು ಪರಿಷತ್ತಿ ನಿಂದ ಪಡೆದ ಅಧಿಕೃತ ಅಪೇಕ್ಷಾ ಪತ್ರದಲ್ಲಿ (ಅರ್ಜಿಯಲ್ಲಿ) ವಿವರವಾಗಿ ೭ನೆಯ ನಿಬಂಧನೆಯಲ್ಲಿ ಕಾಣಿಸಿರುವ ಆಯಾ ವರ್ಗದ ಸದಸ್ಯತ್ವಕ್ಕಾಗಿ ಕೊಡತಕ್ಕ ಸದಸ್ಯತ್ವಶುಲ್ಕ ಮತ್ತು ಪ್ರವೇಶ ಶುಲ್ಕಗಳೊಡನೆ ಪರಿಷತ್ತಿಗೆ ಸಲ್ಲಿಸ ತಕ್ಕದ್ದು. ಅಂತಹವರನ್ನು ಆಯಾವರ್ಗದ ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಕಾರ್ಯಕಾರಿ ಸಮಿತಿಗೆ ಅಧಿಕಾರವಿರ ತಕ್ಕದ್ದು. ಸಕಾರಣವಾಗಿ ಅಪೇಕ್ಷಾ ಪತ್ರವನ್ನು ತಿರಸ್ಕರಿಸಿದರೆ ಸದಸ್ಯತ್ವದ ಶುಲ್ಕವನ್ನು ಹಿಂದಿರುಗಿಸತಕ್ಕದ್ದು. | ಅ) ಸದಸ್ಯರಾಗಿ ಸೇರಲು ಬಯಸುವ ವ್ಯಕ್ತಿ ಅಥವಾ ಸಂಸ್ಥೆಯು ಪರಿಷತ್ತಿನಿಂದ ಪಡೆದ ಅಧಿಕೃತ ಅಪೇಕ್ಷಾ ಪತ್ರದಲ್ಲಿ (ಅರ್ಜಿಯಲ್ಲಿ) ವಿವರ ವಾಗಿ ೭ನೆಯ ನಿಬಂಧನೆಯಲ್ಲಿ ಕಾಣಿಸಿರುವ ಆಯಾವರ್ಗದ ಸದಸ್ಯತ್ವಕ್ಕಾಗಿ ಕೊಡತಕ್ಕ ಸದಸ್ಯತ್ವಶುಲ್ಕ ಮತ್ತು ಪ್ರವೇಶ ಶುಲ್ಕಗಳೊಡನೆ ಪರಿಷತ್ತಿಗೆ ಸಲ್ಲಿಸತಕ್ಕದ್ದು. ಅಂತಹವರನ್ನು ಆಯಾವರ್ಗದ ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಕಾರ್ಯಕಾರಿ ಸಮಿತಿಗೆ ಅಧಿಕಾರವಿರತಕ್ಕದ್ದು. ಸಕಾರಣವಾಗಿ ಅಪೇಕ್ಷಾಪತ್ರವನ್ನು ತಿರಸ್ಕರಿಸಿದರೆ ಸದಸ್ಯತ್ವದ ಶುಲ್ಕವನ್ನು ಹಿಂದಿರುಗಿಸತಕ್ಕದ್ದು. | ಅ) ಬದಲಾವಣೆ ಇರುವುದಿಲ್ಲ |
| | ಆ) ಪರಿಷತ್ತಿನ ವಾರ್ಷಿಕ ಸದಸ್ಯತ್ವದ ಅವಧಿ ಏಪ್ರಿಲ್ ೧ ರಿಂದ ಮಾರ್ಚ್ ೩೧ರವರೆಗೆ ಇರತಕ್ಕದ್ದು. ವರ್ಷದ ನಡುವೆ ಯಾವಾಗ ಸದಸ್ಯರಾದರೂ ಆ ವರ್ಷಕ್ಕೆ ಸದಸ್ಯತ್ವ ಮತ್ತು ಸದಸ್ಯತ್ವದ ಹಕ್ಕುಬಾಧ್ಯತೆಗಳು ಸಲ್ಲತಕ್ಕದ್ದು. | | ವಾರ್ಷಿಕ ಸದಸ್ಯರು ಹಾಗೂ ವಾರ್ಷಿಕ ಸದಸ್ಯ ಸಂಸ್ಥೆಗಳನ್ನು ಕೈಬಿಡಲಾಗಿದೆ. |
| | ಇ) ವಾರ್ಷಿಕ ಸದಸ್ಯರು ಮತ್ತು ಸಂಘ ಸಂಸ್ಥೆಗಳು ಸದಸ್ಯತ್ವದ ಶುಲ್ಕವನ್ನು ಪ್ರವೇಶಧನವಿಲ್ಲದೆ ಆ ವರ್ಷದ ಏಪ್ರಿಲ್ ತಿಂಗಳ ಅಂತ್ಯದೊಳಗಾಗಿ ಸಲ್ಲಿಸಿ ಸದಸ್ಯತ್ವ ವನ್ನು ಮುಂದುವರಿಸಿಕೊಳ್ಳ ಬಹುದು. ಹಾಗೆ ಮುಂದುವರಿಸಿ ಕೊಳ್ಳದಿದ್ದರೆ ಸದಸ್ಯತ್ವವು ರದ್ದಾಗುತ್ತದೆ. | | ವಾರ್ಷಿಕ ಸದಸ್ಯರು ಹಾಗೂ ವಾರ್ಷಿಕ ಸದಸ್ಯ ಸಂಸ್ಥೆಗಳನ್ನು ಕೈಬಿಡಲಾಗಿದೆ. |
| | ಈ) ಎಲ್ಲ ವರ್ಗಗಳ ಸದಸ್ಯರು ತಮ್ಮ ಸದಸ್ಯತ್ವದ ಶುಲ್ಕವನ್ನು ಒಂದೇ ಕಂತಿನಲ್ಲಿ ಸಲ್ಲಿಸಬೇಕು. | ಆ) ಎಲ್ಲ ವರ್ಗಗಳ ಸದಸ್ಯರು ತಮ್ಮ ಸದಸ್ಯತ್ವದ ಶುಲ್ಕವನ್ನು ಒಂದೇ ಕಂತಿನಲ್ಲಿ ಸಲ್ಲಿಸಬೇಕು. | ಬದಲಾವಣೆ ಇರುವುದಿಲ್ಲ |
| | ಉ) ಸದಸ್ಯರು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪಡೆದಿರಬೇಕು. ಗುರುತಿನ ಚೀಟಿ ಇಲ್ಲದ ಸದಸ್ಯರಿಗೆ ಮತದಾನದಲ್ಲಾಗಲೀ ಸಕಲ ಸದಸ್ಯರ ಸಭೆಯಲ್ಲಾಗಲೀ ಭಾಗವಹಿಸುವ ಅವಕಾಶವಿರುವುದಿಲ್ಲ. | ಇ) ಸದಸ್ಯರು ಆಜೀವ ಸದಸ್ಯತ್ವ ಗುರುತಿನ ಚೀಟಿಯನ್ನು ಹೊಂದಿರಬೇಕು. ಗುರುತಿನ ಚೀಟಿ ಇಲ್ಲದ ಸದಸ್ಯರು ಜನತಾ ಪ್ರಾತಿನಿಧ್ಯ ಕಾಯ್ದೆಯಲ್ಲಿ ಸೂಚಿಸಿರುವ ಗುರುತಿನ ಚೀಟಿಯಲ್ಲಿ ಒಂದನ್ನು ತೋರಿಸಿ ಮತದಾನ ಹಾಗೂ ಸದಸ್ಯರ ಸಭೆಯಲ್ಲಿ ಭಾಗವಹಿಸುವುದು. | ಪರಿಷತ್ತಿನ ಚುನಾವಣಾ ಉಪನಿಬಂಧನೆ ೪೧(ಈ) ರನ್ವಯ ನಿಬಂಧನೆಗಳಿಗೆ ವಿರೋಧವಿಲ್ಲದಂತೆ ಪರಿಷತ್ತಿನ ಚುನಾವಣೆಗಳನ್ನು ಜನತಾ ಪ್ರಾತಿನಿಧಿಕ ಕಾಯ್ದೆಯ ನಿಯಮಗಳಿಗನು ಗುಣವಾಗಿ ನಡೆಸತಕ್ಕದ್ದು ಎಂದಿದೆ. ಪರಿಷತ್ತಿನ ಗುರುತಿನ ಚೀಟಿ |

| ಕ್ರ.ಸಂ. | ಹಾಲಿ ಇರುವ ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ | ಕಾರಣ |
|---|---|---|---|
| | | | ಇಲ್ಲದ ಸದಸ್ಯರು ಜನತಾ ಪ್ರಾತಿನಿಧಿಕ ಕಾಯ್ದೆಯಲ್ಲಿ ಸೂಚಿಸಿರುವ ಇತರೆ ಗುರುತಿನ ಚೀಟಿಯನ್ನು ತೋರಿಸಿ ಮತದಾನ ಮಾಡಲು ಹಾಗೂ ಸದಸ್ಯರ ಸಭೆಯಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟರೆ ಸದಸ್ಯರೆಲ್ಲರಿಗೂ ಅವಕಾಶ ನೀಡಿದಂತಾಗುತ್ತದೆ. |
| | ಊ) ಸದಸ್ಯ ಅಥವಾ ಸದಸ್ಯ ಸಂಸ್ಥೆಯ ವರ್ತನೆಯು ಪರಿಷತ್ತಿನ ಘನತೆ ಗೌರವಗಳಿಗೆ ಹಾಗೂ ಧ್ಯೇಯೋದ್ದೇಶಗಳಿಗೆ ವಿರೋಧವೆಂದು ಕಂಡು ಬಂದರೆ ಅಂತಹ ಸದಸ್ಯ ಅಥವಾ ಸದಸ್ಯ ಸಂಸ್ಥೆಯ ವಿವರಣೆಯನ್ನು ಪಡೆದು ಪರಿಶೀಲನೆ ಮಾಡಿ ಸದಸ್ಯತ್ವವನ್ನು ಮೂರು ವರ್ಷಗಳ ಕಾಲ ಅಮಾನತ್ತು ಮಾಡುವ ಅಧಿಕಾರವು ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು, ಇಂತಹ ನಿರ್ಣಯವನ್ನು ಮುಂಬರುವ ವಾರ್ಷಿಕಾಧಿವೇಶನಕ್ಕೆ ತಿಳಿಸತಕ್ಕದ್ದು. | ಈ) ಸದಸ್ಯ ಅಥವಾ ಸದಸ್ಯ ಸಂಸ್ಥೆಯ ವರ್ತನೆಯು ಪರಿಷತ್ತಿನ ಘನತೆ ಗೌರವಗಳಿಗೆ ಹಾಗೂ ಧ್ಯೇಯೋದ್ದೇಶಗಳಿಗೆ ವಿರೋಧವೆಂದು ಕಂಡುಬಂದರೆ ಅಂತಹ ಸದಸ್ಯ ಅಥವಾ ಸದಸ್ಯ ಸಂಸ್ಥೆಯ ವಿವರಣೆಯನ್ನು ಪಡೆದು ಪರಿಶೀಲನೆ ಮಾಡಿ ಸದಸ್ಯತ್ವವನ್ನು ಮೂರು ವರ್ಷಗಳ ಕಾಲ ಅಮಾನತ್ತು ಮಾಡುವ ಅಧಿಕಾರವು ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು, ಇಂತಹ ನಿರ್ಣಯವನ್ನು ಮುಂಬರುವ ವಾರ್ಷಿಕಾಧಿವೇಶನಕ್ಕೆ ತಿಳಿಸತಕ್ಕದ್ದು. | ಬದಲಾವಣೆ ಇರುವುದಿಲ್ಲ |
| | ಋ) ಒಮ್ಮೆ ಅಂಗೀಕೃತವಾದ ಸದಸ್ಯತ್ವದ ಹಣವನ್ನು ಯಾವುದೇ ಕಾರಣದಿಂದ ಹಿಂದಿರುಗಿಸತಕ್ಕದಲ್ಲ. | ಉ) ಒಮ್ಮೆ ಅಂಗೀಕೃತವಾದ ಸದಸ್ಯತ್ವದ ಹಣವನ್ನು ಯಾವುದೇ ಕಾರಣದಿಂದ ಹಿಂದಿರುಗಿಸತಕ್ಕದಲ್ಲ. | ಬದಲಾವಣೆ ಇರುವುದಿಲ್ಲ |
| | ೠ) ಸದಸ್ಯ, ಸದಸ್ಯ ಸಂಸ್ಥೆಯು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಲ್ಲಿ ಅದನ್ನು ಅಂಗೀಕರಿಸುವ ಅಧಿಕಾರ ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು. | ಊ) ಸದಸ್ಯ, ಸದಸ್ಯ ಸಂಸ್ಥೆಯು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಲ್ಲಿ ಅದನ್ನು ಅಂಗೀಕರಿಸುವ ಅಧಿಕಾರ ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು. | ಬದಲಾವಣೆ ಇರುವುದಿಲ್ಲ |
| ೩. | **ನಿಬಂಧನೆ –೯ :**<br>**ಸದಸ್ಯ ಮತ್ತು ಸಂಸ್ಥೆಯ ಹಕ್ಕು ಬಾಧ್ಯತೆಗಳು**<br>ಅ) ಸದಸ್ಯತ್ವ ಅಂಗೀಕಾರವಾದ ದಿನದಿಂದ ಸದಸ್ಯತ್ವದ ಎಲ್ಲಾ ಹಕ್ಕುಗಳು ೩೭ನೆಯ ನಿಬಂಧನೆಗೆ ಒಳಪಟ್ಟು ಅವರಿಗೆ ಬರತಕ್ಕದ್ದು.<br>ಆ) ಪರಿಷತ್ತಿನ ಉತ್ಸವ, ಉಪನ್ಯಾಸ, ಗೋಷ್ಠಿ, ಸಮ್ಮೇಳನ ಇತ್ಯಾದಿ ಕಾರ್ಯಗಳಲ್ಲಿ ನಿಯಮಾನುಸಾರ ಭಾಗವಹಿಸುವ ಅಧಿಕಾರ ವಿರತಕ್ಕದ್ದು. | **ನಿಬಂಧನೆ –೯ :**<br>**ಸದಸ್ಯ ಮತ್ತು ಸಂಸ್ಥೆಯ ಹಕ್ಕು ಬಾಧ್ಯತೆಗಳು**<br>ಅ) ಸದಸ್ಯತ್ವ ಅಂಗೀಕಾರವಾದ ದಿನದಿಂದ ಸದಸ್ಯತ್ವದ ಎಲ್ಲಾ ಹಕ್ಕುಗಳು ೩೭ನೆಯ ನಿಬಂಧನೆಗೆ ಒಳಪಟ್ಟು ಅವರಿಗೆ ಬರತಕ್ಕದ್ದು.<br>ಆ) ಪರಿಷತ್ತಿನ ಉತ್ಸವ, ಉಪನ್ಯಾಸ, ಗೋಷ್ಠಿ, ಸಮ್ಮೇಳನ ಇತ್ಯಾದಿ ಕಾರ್ಯಗಳಲ್ಲಿ ನಿಯಮಾನುಸಾರ ಭಾಗವಹಿಸುವ ಅಧಿಕಾರ ವಿರತಕ್ಕದ್ದು. | ಅ) ಬದಲಾವಣೆ ಇರುವುದಿಲ್ಲ<br>ಆ) ಬದಲಾವಣೆ ಇರುವುದಿಲ್ಲ |

| ಕ್ರ.ಸಂ. | ಹಾಲಿ ಇರುವ ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ | ಕಾರಣ |
|---|---|---|---|
| | ಇ) ಪುಸ್ತಕ ಭಂಡಾರ, ವಾಚನಾಲಯ ಮೊದಲಾದ ಸೌಕರ್ಯಗಳನ್ನು ನಿಯಮಾನುಸಾರ ಪಡೆಯಲು ಅಧಿಕಾರವಿರತಕ್ಕದ್ದು. | ಇ) ಪುಸ್ತಕ ಭಂಡಾರ, ವಾಚನಾಲಯ ಮೊದಲಾದ ಸೌಕರ್ಯಗಳನ್ನು ನಿಯಮಾನುಸಾರ ಪಡೆಯಲು ಅಧಿಕಾರ ವಿರತಕ್ಕದ್ದು. | ಇ) ಬದಲಾವಣೆ ಇರುವುದಿಲ್ಲ |
| | ಈ) ಸದಸ್ಯರು ಪರಿಷತ್ತಿನ ಪ್ರಕಟಣೆಗಳ ಪ್ರತಿ ಶೀರ್ಷಿಕೆಯ ಒಂದೊಂದು ಪ್ರತಿಯನ್ನು ಮುಕ್ಕಾಲು ಬೆಲೆಗೆ ಪಡೆಯಲು ಹಕ್ಕುದಾರರಾಗಿರ ತಕ್ಕದ್ದು, ಸರ್ಕಾರದ ಸಹಾಯಧನ ಪಡೆದು ಕಡಿಮೆ ಬೆಲೆ ನಿಗದಿ ಗೊಳಿಸಿದ ಪ್ರಕಟಣೆಗಳು ಹಾಗೂ ಪರಿಷತ್ತು ನಡೆಸುವ ಪರೀಕ್ಷೆಗಳ ಪಠ್ಯಪುಸ್ತಕಗಳು ಹಾಗೂ ಪರಿಷತ್ಪತ್ರಿಕೆಗೆ ಮೇಲಿನ ನಿಯಮ ಅನ್ವಯಿಸುವುದಿಲ್ಲ. | ಈ) ಸದಸ್ಯರು ಪರಿಷತ್ತಿನ ಪ್ರಕಟಣೆಗಳ ಪ್ರತಿ ಶೀರ್ಷಿಕೆಯ ಒಂದೊಂದು ಪ್ರತಿಯನ್ನು ಮುಕ್ಕಾಲು ಬೆಲೆಗೆ ಪಡೆಯಲು ಹಕ್ಕುದಾರ ರಾಗಿರತಕ್ಕದ್ದು, ಸರ್ಕಾರದ ಸಹಾಯಧನ ಪಡೆದು ಕಡಿಮೆ ಬೆಲೆ ನಿಗದಿ ಗೊಳಿಸಿದ ಪ್ರಕಟಣೆಗಳು ಹಾಗೂ ಪರಿಷತ್ತು ನಡೆಸುವ ಪರೀಕ್ಷೆಗಳ ಪಠ್ಯಪುಸ್ತಕಗಳು ಹಾಗೂ ಪರಿಷತ್ಪತ್ರಿಕೆಗೆ ಮೇಲಿನ ನಿಯಮ ಅನ್ವಯಿಸು ವುದಿಲ್ಲ. | ಈ) ಬದಲಾವಣೆ ಇರುವುದಿಲ್ಲ |
| | ಉ) 'ಕನ್ನಡ ನುಡಿ' ಪತ್ರಿಕೆಯನ್ನು ಉಚಿತ ವಾಗಿ ಪಡೆಯತಕ್ಕದ್ದು. | ಉ) 'ಕನ್ನಡ ನುಡಿ' ಪತ್ರಿಕೆಯನ್ನು ಉಚಿತವಾಗಿ ಪಡೆಯತಕ್ಕದ್ದು. ಇನ್ನು ಹೊಸದಾಗಿ ತಿದ್ದುಪಡಿಯಾದ ದಿನಾಂಕದ ನಂತರ ಸದಸ್ಯರಾಗುವವರು ಕನ್ನಡ ನುಡಿ ಚಂದದಾರ ರಾಗಲು ರೂ. ೫೦೦ ಗಳನ್ನು ಪಾವತಿಸುವುದು. ಅಂತಹವರಿಗೆ ಮಾತ್ರ ಕನ್ನಡ ನುಡಿ ಕಳಿಸಲಾಗುವುದು. | ಮುದ್ರಣ ಕಾಗದ ಬೆಲೆ ಹೆಚ್ಚುವರಿ, ಸಾಗಣಿಕೆ, ವಿದ್ಯುಚ್ಛಕ್ತಿ ಇತರೆ ಸಾಮಗ್ರಿಗಳ ಬೆಲೆ ಏರಿಕೆಯಿಂದ ಕನ್ನಡ ನುಡಿಯ ಶುಲ್ಕವನ್ನು ಹೆಚ್ಚಿಸಲಾಗಿದೆ. ಹಾಗೂ ಅಂಚೆ ವೆಚ್ಚವನ್ನು ಸಹ ಭರಿಸಬೇಕಾಗಿದೆ. ಅಂಚೆ ವೆಚ್ಚ ಕೂಡಾ ಮೊದಲಿಗಿಂತ ಹೆಚ್ಚಾಗಿದೆ. |
| | ಊ) ವಾರ್ಷಿಕ ಸಭೆಗಳಲ್ಲೂ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರ ಆಯ್ಕೆಯಲ್ಲಿಯೂ ಸಕಲ ಸದಸ್ಯರ ಸಾಮಾನ್ಯ ಅಥವಾ ವಿಶೇಷ ಸಭೆಯ ಕಾರ್ಯಕಲಾಪಗಳ ನಿರ್ಣಯಗಳ ಬಗ್ಗೆಯೂ ೩೨ನೆಯ ನಿಬಂಧನೆಗೆ ಒಳಪಟ್ಟು ಮತಕೊಡುವ ಅಧಿಕಾರವಿರ ತಕ್ಕದ್ದು. | ಊ) ವಾರ್ಷಿಕ ಸಭೆಗಳಲ್ಲೂ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರ ಆಯ್ಕೆಯಲ್ಲಿಯೂ ಸಕಲ ಸದಸ್ಯರ ಸಾಮಾನ್ಯ ಅಥವಾ ವಿಶೇಷ ಸಭೆಯ ಕಾರ್ಯಕಲಾಪಗಳ ನಿರ್ಣಯಗಳ ಬಗ್ಗೆಯೂ ೩೨ನೆಯ ನಿಬಂಧನೆಗೆ ಒಳಪಟ್ಟು ಮತಕೊಡುವ ಅಧಿಕಾರವಿರತಕ್ಕದ್ದು. | ಊ) ಬದಲಾವಣೆ ಇರುವುದಿಲ್ಲ |
| ೪. | **ನಿಬಂಧನೆ – ೧೧ : ಕಾರ್ಯಕಾರಿ ಸಮಿತಿ**<br>ಪರಿಷತ್ತಿನ ಆಡಳಿತಗಳನ್ನೆಲ್ಲಾ ಈ ಮುಂದಿನಂತೆ ರಚಿತವಾದ ಕಾರ್ಯಕಾರಿ ಸಮಿತಿ ನಡೆಸತಕ್ಕದ್ದು. ಅಧ್ಯಕ್ಷರು ಅದರ ಪ್ರತಿನಿಧಿಯಾಗಿ ಕಾರ್ಯಗಳನ್ನು ನಡೆಸತಕ್ಕದ್ದು. ಕಾರ್ಯಕಾರಿ ಸಮಿತಿಯಲ್ಲಿ ಈ ಕೆಳಗಿನಂತೆ ಸದಸ್ಯರಿರತಕ್ಕದ್ದು.<br>ಅ) ಅಧ್ಯಕ್ಷರು ೧<br>ಆ) ಗೌರವ ಕಾರ್ಯದರ್ಶಿಗಳು ೨<br>ಇ) ಗೌರವ ಕೋಶಾಧ್ಯಕ್ಷರು ೧<br>ಈ) ಜಿಲ್ಲಾ ಘಟಕಗಳ ಚುನಾಯಿತ ಅಧ್ಯಕ್ಷರು ೩೦ | **ನಿಬಂಧನೆ – ೧೧ : ಕಾರ್ಯಕಾರಿ ಸಮಿತಿ**<br>ಪರಿಷತ್ತಿನ ಆಡಳಿತಗಳನ್ನೆಲ್ಲಾ ಈ ಮುಂದಿ ನಂತೆ ರಚಿತವಾದ ಕಾರ್ಯಕಾರಿ ಸಮಿತಿ ನಡೆಸ ತಕ್ಕದ್ದು. ಅಧ್ಯಕ್ಷರು ಅದರ ಪ್ರತಿನಿಧಿಯಾಗಿ ಕಾರ್ಯಗಳನ್ನು ನಡೆಸತಕ್ಕದ್ದು. ಕಾರ್ಯಕಾರಿ ಸಮಿತಿಯಲ್ಲಿ ಈ ಕೆಳಗಿನಂತೆ ಸದಸ್ಯರಿರತಕ್ಕದ್ದು.<br>ಅ) ಅಧ್ಯಕ್ಷರು ೧<br>ಆ) ಗೌರವ ಕಾರ್ಯದರ್ಶಿಗಳು ೨<br>ಇ) ಗೌರವ ಕೋಶಾಧ್ಯಕ್ಷರು ೧<br>ಈ) ಜಿಲ್ಲಾ ಘಟಕಗಳ ಚುನಾಯಿತ ಅಧ್ಯಕ್ಷರು ೩೦ | |

| ಕ್ರ.ಸಂ. | ಹಾಲಿ ಇರುವ ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ | ಕಾರಣ |
|---|---|---|---|
| | ಉ) ಗಡಿನಾಡ ಘಟಕಗಳ ಚುನಾಯಿತ ಅಧ್ಯಕ್ಷರು–೫ ೪<br>(ತಮಿಳುನಾಡು, ಆಂಧ್ರ, ಕೇರಳ, ಮಹಾರಾಷ್ಟ್ರ ಮತ್ತು * ಗೋವಾ)<br>ಊ) ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರು ೧<br>ಋ) ಸಮ್ಮೇಳನಾಧ್ಯಕ್ಷರು ೧<br>ೠ) ಕನ್ನಡ ಅಧ್ಯಯನ ವ್ಯವಸ್ಥೆಯುಳ್ಳ ವಿಶ್ವವಿದ್ಯಾನಿಲಯದ ಪ್ರತಿನಿಧಿ (ಕನ್ನಡ ಅಕ್ಷರಾನುಕ್ರಮಣಿಯಲ್ಲಿ) ೨<br>ಎ) ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು ೧<br>ಏ) ಮಹಿಳಾ ಸಾಹಿತಿ ೧<br>ಐ) ಪರಿಶಿಷ್ಟ ಜಾತಿ ಪ್ರತಿನಿಧಿ ೧<br>ಒ) ಸಂಘ ಸಂಸ್ಥೆಗಳ ಪ್ರತಿನಿಧಿ ೧<br>**ಒಟ್ಟು ೪೬** | ಉ) ಗಡಿನಾಡ ಘಟಕಗಳ ಚುನಾಯಿತ ಅಧ್ಯಕ್ಷರು–೫ ೪<br>(ತಮಿಳುನಾಡು, ಆಂಧ್ರ, ಕೇರಳ, ಮಹಾರಾಷ್ಟ್ರ ಮತ್ತು *ಗೋವಾ)<br>ಊ) ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರು ೧<br>ಋ) ಸಮ್ಮೇಳನಾಧ್ಯಕ್ಷರು ೧<br>ೠ) ಕನ್ನಡ ಅಧ್ಯಯನ ವ್ಯವಸ್ಥೆಯುಳ್ಳ ವಿಶ್ವವಿದ್ಯಾನಿಲಯದ ಪ್ರತಿನಿಧಿ (ಕನ್ನಡ ಅಕ್ಷರಾನುಕ್ರಮಣಿಯಲ್ಲಿ) ೨<br>ಎ) ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು ೧<br>ಏ) ಮಹಿಳಾ ಸಾಹಿತಿ ೨<br>ಐ) ಪರಿಶಿಷ್ಟ ಜಾತಿ ಪ್ರತಿನಿಧಿ ೨<br>ಒ) ಪರಿಶಿಷ್ಟ ಪಂಗಡ ಪ್ರತಿನಿಧಿ ೧<br>ಓ) ಸಂಘ ಸಂಸ್ಥೆಗಳ ಪ್ರತಿನಿಧಿ ೧<br>**ಒಟ್ಟು ೪೯** | ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡುವ ಸಲುವಾಗಿ ಒಂದರಿಂದ ೨ಕ್ಕೆ ಏರಿಸಲಾಗಿದೆ.<br><br>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಹೆಚ್ಚಿನ ಪ್ರಾತಿನಿಧ್ಯ ನೀಡುವ ಸಲುವಾಗಿ ಪರಿಶಿಷ್ಟ ಜಾತಿ ಪ್ರತಿನಿಧಿಯನ್ನು ಒಂದರಿಂದ ೨ಕ್ಕೆ ಏರಿಸಲಾಗಿದೆ. ಪರಿಶಿಷ್ಟ ಪಂಗಡಕ್ಕೆ ಒಂದು ಪ್ರತಿನಿಧಿಯನ್ನು ಸೇರಿಸುವುದು ಅವಶ್ಯಕವಾಗಿದೆ. |
| ೫. | **ನಿಬಂಧನೆ – ೧೨**<br>ಅ) ಮೇಲಿನ ಆ, ಇ, ಗಳನ್ನು ಅಧ್ಯಕ್ಷರು ನಾಮಕರಣ ಮಾಡಿಕೊಳ್ಳತಕ್ಕದ್ದು, ಏ, ಐ, ಒ ಗಳನ್ನು ಕಾರ್ಯಕಾರಿ ಸಮಿತಿಯು ಆರಿಸಬೇಕು.<br>ಆ) ಮೊದಲನೆಯ ಕಾರ್ಯಕಾರಿ ಸಮಿತಿಯು ಅಸ್ತಿತ್ವಕ್ಕೆ ಬರಬೇಕಾದರೆ ಕಾರ್ಯಕಾರಿ ಸಮಿತಿಯ ಚುನಾಯಿತ ಸದಸ್ಯ ಸಂಖ್ಯೆಯ ಮೂರನೇ ಒಂದು ಭಾಗದಷ್ಟಾದರೂ ಇರಬೇಕು. | **ನಿಬಂಧನೆ – ೧೨**<br>ಅ) ಮೇಲಿನ ಆ, ಇ, ಗಳನ್ನು ಅಧ್ಯಕ್ಷರು ನಾಮಕರಣ ಮಾಡಿಕೊಳ್ಳತಕ್ಕದ್ದು, ಏ, ಐ, ಒ, ಓ ಗಳನ್ನು ಕಾರ್ಯಕಾರಿ ಸಮಿತಿಯು ಆರಿಸಬೇಕು.<br>ಆ) ಮೊದಲನೆಯ ಕಾರ್ಯಕಾರಿ ಸಮಿತಿಯು ಅಸ್ತಿತ್ವಕ್ಕೆ ಬರಬೇಕಾದರೆ ಕಾರ್ಯಕಾರಿ ಸಮಿತಿಯ ಚುನಾಯಿತ ಸದಸ್ಯ ಸಂಖ್ಯೆಯ ಮೂರನೇ ಒಂದು ಭಾಗದಷ್ಟಾದರೂ ಇರಬೇಕು.<br>ಇ) ನಿಬಂಧನೆ ೧೧, ೧೪(ಅ) ಮತ್ತು ೧೫(ಅ) ರಲ್ಲಿ ಸೂಚಿಸಿರುವ ಕಾರ್ಯಕಾರಿ ಸಮಿತಿ ಸದಸ್ಯರನ್ನು ಹೊರತು ಪಡಿಸಿ ಇನ್ಯಾವುದೇ ಸದಸ್ಯ /ಹುದ್ದೆಯನ್ನು ಸೃಷ್ಟಿಸಿಕೊಂಡಲ್ಲಿ ಅಂತಹ ಸದಸ್ಯ / ಹುದ್ದೆಯನ್ನು ಮಾನ್ಯ ಮಾಡತಕ್ಕದ್ದಲ್ಲ. | ಪರಿಶಿಷ್ಟ ಪಂಗಡಕ್ಕೆ ಪ್ರಾತಿನಿಧ್ಯ ನೀಡುವ ಸಲುವಾಗಿ ಒಂದು ಪ್ರತಿನಿಧಿಯನ್ನು ಸೇರಿಸಲಾಗಿದೆ.<br><br>ಆ) ಬದಲಾವಣೆ ಇರುವುದಿಲ್ಲ<br><br>ಇ) ಸಾರ್ವಜನಿಕರ ದೂರಿನ ಹಿನ್ನೆಲೆಯಲ್ಲಿ ಪರಿಷತ್ತಿನ ನಿಬಂಧನೆಯಲ್ಲಿ ಇರದ ಸದಸ್ಯ/ಹುದ್ದೆಯನ್ನು ಅಮಾನ್ಯಗೊಳಿಸುವ ಉದ್ದೇಶ ದಿಂದ ಹೊಸದಾಗಿ ಸೇರಿಸಿದೆ. |
| ೬. | **ನಿಬಂಧನೆ – ೧೩**<br>ಅ) ಪರಿಷತ್ತಿನ ಅಧ್ಯಕ್ಷರು, ಜಿಲ್ಲಾ ಘಟಕದ ಅಧ್ಯಕ್ಷರು ನೇರ ಮತದಾನದ ಮೂಲಕ ಆಯ್ಕೆಯಾಗತಕ್ಕದ್ದು. ಚುನಾವಣಾ ಉಪನಿಬಂಧನೆಗಳಿಗನುಗುಣವಾಗಿ ಕರ್ನಾಟಕ ರಾಜ್ಯದಲ್ಲಿರುವ ಪರಿಷತ್ತಿನ | **ನಿಬಂಧನೆ – ೧೩**<br>ಅ) ಪರಿಷತ್ತಿನ ಅಧ್ಯಕ್ಷರು, ಜಿಲ್ಲಾ ಘಟಕದ ಅಧ್ಯಕ್ಷರು ನೇರ ಮತದಾನದ ಮೂಲಕ ಆಯ್ಕೆಯಾಗತಕ್ಕದ್ದು. ಚುನಾವಣಾ ಉಪನಿಬಂಧನೆಗಳಿಗನುಗುಣವಾಗಿ ಕರ್ನಾಟಕ ರಾಜ್ಯದಲ್ಲಿರುವ | ಅ) ಬದಲಾವಣೆ ಇರುವುದಿಲ್ಲ |

| ಕ್ರ.ಸಂ. | ಹಾಲಿ ಇರುವ ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ | ಕಾರಣ |
|---|---|---|---|
| | ಸದಸ್ಯರು ನೇರ ಮತದಾನದ ಮೂಲಕ ಮತ ಚಲಾಯಿಸತಕ್ಕದ್ದು. ಗಡಿನಾಡ ಘಟಕಗಳಿರುವ ರಾಜ್ಯಗಳ ಸದಸ್ಯರೂ ಸೇರಿದಂತೆ ಕರ್ನಾಟಕದ ಹೊರಗಡೆ ಇರುವ ಸದಸ್ಯರು ಅಂಚೆ ಮೂಲಕ ಮತಚಲಾಯಿಸತಕ್ಕದ್ದು. ಈ ಚುನಾವಣೆ ನಡೆದ ಎರಡು ತಿಂಗಳೊಳಗಾಗಿ ಜಿಲ್ಲೆಗಳಲ್ಲಿ ಜಿಲ್ಲಾ ಘಟಕಗಳು ಗಡಿನಾಡ ಘಟಕಗಳು ರಚಿತವಾಗಿ ಪರಿಷತ್ತು ಸೂಚಿಸುವ ಕೆಲಸ ಕಾರ್ಯಗಳನ್ನು ನಡೆಸತಕ್ಕದ್ದು. ಜಿಲ್ಲಾ ಘಟಕದ ಅಧ್ಯಕ್ಷರು ಮತ್ತು ಗಡಿನಾಡ ಘಟಕದ ಅಧ್ಯಕ್ಷರು ಅಧಿಕಾರ ಪ್ರಯುಕ್ತ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿರತಕ್ಕದ್ದು. | ಪರಿಷತ್ತಿನ ಸದಸ್ಯರು ನೇರ ಮತದಾನದ ಮೂಲಕ ಮತ ಚಲಾಯಿಸತಕ್ಕದ್ದು. ಗಡಿನಾಡ ಘಟಕಗಳಿರುವ ರಾಜ್ಯಗಳ ಸದಸ್ಯರೂ ಸೇರಿದಂತೆ ಕರ್ನಾಟಕದ ಹೊರಗಡೆ ಇರುವ ಸದಸ್ಯರು ಅಂಚೆ ಮೂಲಕ ಮತಚಲಾಯಿಸ ತಕ್ಕದ್ದು. ಈ ಚುನಾವಣೆ ನಡೆದ ಎರಡು ತಿಂಗಳೊಳಗಾಗಿ ಜಿಲ್ಲೆಗಳಲ್ಲಿ ಜಿಲ್ಲಾ ಘಟಕಗಳು ಗಡಿನಾಡ ಘಟಕಗಳು ರಚಿತವಾಗಿ ಪರಿಷತ್ತು ಸೂಚಿಸುವ ಕೆಲಸ ಕಾರ್ಯಗಳನ್ನು ನಡೆಸತಕ್ಕದ್ದು. ಜಿಲ್ಲಾ ಘಟಕದ ಅಧ್ಯಕ್ಷರು ಮತ್ತು ಗಡಿನಾಡ ಘಟಕದ ಅಧ್ಯಕ್ಷರು ಅಧಿಕಾರ ಪ್ರಯುಕ್ತ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿರತಕ್ಕದ್ದು. | |
| | ಆ) ಪರಿಷತ್ತಿನ ಕಾರ್ಯಕಾರಿ ಸಮಿತಿಯ ಅವಧಿ ಮೂರು ವರ್ಷಗಳು ಇರತಕ್ಕದ್ದು. | ಆ) ಪರಿಷತ್ತಿನ ಕಾರ್ಯಕಾರಿ ಸಮಿತಿಯ ಅವಧಿ ಐದು ವರ್ಷಗಳು ಇರತಕ್ಕದ್ದು. | ಆ) ಅನೇಕ ಸಂಘ ಸಂಸ್ಥೆಗಳ, ಲೋಕಸಭೆ, ವಿಧಾನಸಭೆ, ವಿಧಾನ ಪರಿಷತ್, ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯ್ತಿಗಳು, ಸಹಕಾರ ಸಂಘಗಳ ಅಧಿಕಾರ ಅವಧಿ ಐದು ವರ್ಷಗಳಿವೆ. ಸಾಹಿತ್ಯ ಪರಿಷತ್ತಿನಲ್ಲೂ ಐದು ವರ್ಷಗಳಿದ್ದಲ್ಲಿ ಹಮ್ಮಿಕೊಳ್ಳುವ ಕಾರ್ಯ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರಲು ಅನುಕೂಲವಾಗುವುದು. ಅಲ್ಲದೇ ಚುನಾವಣಾ ವೆಚ್ಚವನ್ನು ೩ ವರ್ಷದ ಬದಲಾಗಿ ೫ ವರ್ಷಕ್ಕೆ ಮಾಡುವುದರಿಂದ ಸಾರ್ವಜನಿಕರ ಹಣ ಅನವಶ್ಯಕವಾಗಿ ಖರ್ಚಾಗುವುದು ತಪ್ಪುತ್ತದೆ. ಚುನಾವಣೆ ತಯಾರಿ ಹಾಗೂ ಚುನಾವಣೆ ಪ್ರಕ್ರಿಕೆ ಮುಗಿಯುವವರೆಗೆ ಹಲವಾರು ಸಿಬ್ಬಂದಿಗಳು ಈ ಕೆಲಸ ನಿರ್ವಹಿಸುತ್ತಿದ್ದು, ೩ ವರ್ಷದಿಂದ ೫ ವರ್ಷಕ್ಕೆ ಅವಧಿ ಹೆಚ್ಚಿಸುವುದರಿಂದ ಹೆಚ್ಚುವರಿ ಶ್ರಮವೂ ಆಗುವುದಿಲ್ಲ. ಅಧ್ಯಕ್ಷರು ರಾಜ್ಯದಲ್ಲಿ ಪ್ರವಾಸ ಕೈಗೊಂಡಾಗ ಹಲವಾರು ಜಿಲ್ಲೆಯಲ್ಲಿ ಹಾಗೂ ಗ್ರಾಮೀಣ ಭಾಗದ ಜನರೂ ಕೂಡ ಈ ಬದಲಾವಣೆಯನ್ನು ಬಯಸಿರುವುದರಿಂದ ಹಾಗೂ ಕಾರ್ಯಕಾರಿ ಸಮಿತಿಯು ಕೂಡ ಒಮ್ಮತದಿಂದ ಒಪ್ಪಿರುವುದರಿಂದ ಅವಧಿಯನ್ನು ಮೂರು ವರ್ಷದಿಂದ ಐದು ವರ್ಷಗಳಿಗೆ ಹೆಚ್ಚಿಸಬಹುದು. |

| ಕ್ರ.ಸಂ. | ಹಾಲಿ ಇರುವ ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ | ಕಾರಣ |
|---|---|---|---|
| ೭. | **ನಿಬಂಧನೆ – ೧೪ : ಜಿಲ್ಲಾ ಘಟಕಗಳು** | **ನಿಬಂಧನೆ – ೧೪ : ಜಿಲ್ಲಾ ಘಟಕಗಳು** | |
| | ಅ) ಕರ್ನಾಟಕ ಕಂದಾಯ ಜಿಲ್ಲೆಗಳಲ್ಲಿ ತಲಾ ಒಂದು ಜಿಲ್ಲಾ ಘಟಕವನ್ನು ರಚಿಸ ತಕ್ಕದ್ದು, ಕಂದಾಯ ಜಿಲ್ಲೆಗಳಿಗೆ ತಾಲ್ಲೂಕು ಗಳಿರುವಂತೆ ಬೆಂಗಳೂರು ನಗರ ಜಿಲ್ಲೆಗೆ ವಿಧಾನಸಭಾ ಕ್ಷೇತ್ರವನ್ನು ಒಂದು ತಾಲ್ಲೂಕಾಗಿ ಪರಿಗಣಿಸ ತಕ್ಕದ್ದು, ವಿಧಾನಸಭಾ ಕ್ಷೇತ್ರದ ಪ್ರತಿನಿಧಿ ಗಳನ್ನು ‘ಕ್ಷೇತ್ರ ಪ್ರತಿನಿಧಿ’ ಗಳೆಂದು ಕರೆಯ ತಕ್ಕದ್ದು. | ಅ) ಕರ್ನಾಟಕ ಕಂದಾಯ ಜಿಲ್ಲೆಗಳಲ್ಲಿ ತಲಾ ಒಂದು ಜಿಲ್ಲಾ ಘಟಕವನ್ನು ರಚಿಸತಕ್ಕದ್ದು, ಕಂದಾಯ ಜಿಲ್ಲೆಗಳಿಗೆ ತಾಲ್ಲೂಕುಗಳಿರುವಂತೆ ಬೆಂಗಳೂರು ನಗರ ಜಿಲ್ಲೆಗೆ ವಿಧಾನಸಭಾ ಕ್ಷೇತ್ರವನ್ನು ಒಂದು ತಾಲ್ಲೂಕಾಗಿ ಪರಿಗಣಿಸ ತಕ್ಕದ್ದು, ವಿಧಾನಸಭಾ ಕ್ಷೇತ್ರದ ಪ್ರತಿನಿಧಿಗಳನ್ನು ‘ಕ್ಷೇತ್ರ ಪ್ರತಿನಿಧಿ’ಗಳೆಂದು ಕರೆಯತಕ್ಕದ್ದು. | ಅ) ಬದಲಾವಣೆ ಇರುವುದಿಲ್ಲ |
| | ಆ) ಜಿಲ್ಲಾ ಘಟಕಗಳ ಕಾರ್ಯಕಾರಿ ಸಮಿತಿಯ ಸ್ವರೂಪ ಈ ಕೆಳಕಂಡಂತೆ ಇರತಕ್ಕದ್ದು.<br>೧) ಅಧ್ಯಕ್ಷರು ೧<br>೨) ಗೌರವ ಕಾರ್ಯದರ್ಶಿಗಳು ೨<br>೩) ಗೌರವ ಕೋಶಾಧ್ಯಕ್ಷರು ೧<br>೪) ತಾಲ್ಲೂಕು ಅಧ್ಯಕ್ಷರುಗಳು / ಕ್ಷೇತ್ರದ ಅಧ್ಯಕ್ಷರು ಆಯಾ ಜಿಲ್ಲೆಯಲ್ಲಿರುವಂತೆ<br>೫) ಮಹಿಳಾ ಪ್ರತಿನಿಧಿ ೧<br>೬) ಪರಿಶಿಷ್ಟ ಜಾತಿ ಪ್ರತಿನಿಧಿ ೧<br>೭) ಸಂಘ ಸಂಸ್ಥೆಗಳ ಪ್ರತಿನಿಧಿ ೧<br>೮) ಜಿಲ್ಲಾ ವಾರ್ತಾಧಿಕಾರಿ ೧<br>೯) ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ೧<br>೧೦) ಜಿಲ್ಲಾ ಘಟಕದ ನಿಕಟಪೂರ್ವ ಅಧ್ಯಕ್ಷರು ೧ | ಆ) ಜಿಲ್ಲಾ ಘಟಕಗಳ ಕಾರ್ಯಕಾರಿ ಸಮಿತಿಯ ಸ್ವರೂಪ ಈ ಕೆಳಕಂಡಂತೆ ಇರತಕ್ಕದ್ದು.<br>೧) ಅಧ್ಯಕ್ಷರು ೧<br>೨) ಗೌರವ ಕಾರ್ಯದರ್ಶಿಗಳು ೨<br>೩) ಗೌರವ ಕೋಶಾಧ್ಯಕ್ಷರು ೧<br>೪) ತಾಲ್ಲೂಕು ಅಧ್ಯಕ್ಷರುಗಳು / ಕ್ಷೇತ್ರದ ಅಧ್ಯಕ್ಷರು ಆಯಾ ಜಿಲ್ಲೆಯಲ್ಲಿರುವಂತೆ<br>೫) ಮಹಿಳಾ ಸಾಹಿತಿ ೨<br>೬) ಪರಿಶಿಷ್ಟ ಜಾತಿ ಪ್ರತಿನಿಧಿ ೨<br>೭) ಪರಿಶಿಷ್ಟ ಪಂಗಡ ಪ್ರತಿನಿಧಿ ೧<br>೮) ಸಂಘ ಸಂಸ್ಥೆಗಳ ಪ್ರತಿನಿಧಿ ೧<br>೯) ಜಿಲ್ಲಾ ವಾರ್ತಾಧಿಕಾರಿ ೧<br>೧೦) ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ೧<br>೧೧) ಜಿಲ್ಲಾ ಘಟಕದ ನಿಕಟಪೂರ್ವ ಅಧ್ಯಕ್ಷರು ೧ | ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡುವ ಸಲುವಾಗಿ ಒಂದರಿಂದ ೨ಕ್ಕೆ ಏರಿಸಲಾಗಿದೆ.<br>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಹೆಚ್ಚಿನ ಪ್ರಾತಿನಿಧ್ಯ ನೀಡುವ ಸಲುವಾಗಿ ಪರಿಶಿಷ್ಟ ಜಾತಿ ಪ್ರತಿನಿಧಿಯನ್ನು ಒಂದರಿಂದ ೨ಕ್ಕೆ ಏರಿಸಲಾಗಿದೆ. ಪರಿಶಿಷ್ಟ ಪಂಗಡಕ್ಕೆ ಒಂದು ಪ್ರತಿನಿಧಿಯನ್ನು ಸೇರಿಸುವುದು ಅವಶ್ಯಕವಾಗಿದೆ. |
| | ಇ) ಪರಿಷತ್ತಿನ ಜಿಲ್ಲಾ ಘಟಕಗಳ ಚಟುವಟಿಕೆ ಗಳಿಗೆ ನೆರವಾಗುವ ಆ ಜಿಲ್ಲೆಯ ಗಣ್ಯರನ್ನು ಜಿಲ್ಲಾ ಘಟಕಗಳ ಕಾರ್ಯ ಕಾರಿ ಸಮಿತಿಗೆ ‘ವಿಶೇಷ ಆಹ್ವಾನಿತ’ ರನ್ನಾಗಿ ಕರೆಯಲು ಅವಕಾಶ ವಿರತಕ್ಕದ್ದು. ಗಡಿ ಜಿಲ್ಲಾ ಘಟಕಗಳಿಗೆ ಗಡಿ ಪ್ರದೇಶದ ಇಬ್ಬರು ಪ್ರತಿನಿಧಿಗಳನ್ನು ವಿಶೇಷ ಆಹ್ವಾನಿತರನ್ನಾಗಿ ಕರೆಯಬಹುದು. | ಇ) ಪರಿಷತ್ತಿನ ಜಿಲ್ಲಾ ಘಟಕಗಳ ಚಟುವಟಿಕೆ ಗಳಿಗೆ ನೆರವಾಗುವ ಆ ಜಿಲ್ಲೆಯ ಗಣ್ಯರನ್ನು ಜಿಲ್ಲಾ ಘಟಕಗಳ ಕಾರ್ಯಕಾರಿ ಸಮಿತಿಗೆ ‘ವಿಶೇಷ ಆಹ್ವಾನಿತ’ ರನ್ನಾಗಿ ಕರೆಯಲು ಅವಕಾಶ ವಿರತಕ್ಕದ್ದು. ಗಡಿ ಜಿಲ್ಲಾ ಘಟಕಗಳಿಗೆ ಗಡಿ ಪ್ರದೇಶದ ಇಬ್ಬರು ಪ್ರತಿನಿಧಿಗಳನ್ನು ವಿಶೇಷ ಆಹ್ವಾನಿತರನ್ನಾಗಿ ಕರೆಯಬಹುದು. | ಇ) ಬದಲಾವಣೆ ಇರುವುದಿಲ್ಲ |
| | ಈ) ಮೇಲಿನಂತೆ ಘಟಕಗಳನ್ನು ರಚಿಸಿ ಅದಕ್ಕೆ ಕೇಂದ್ರ ಅಧ್ಯಕ್ಷರ ಅನುಮತಿ ಪಡೆದು ಅನಂತರ ಪ್ರಕಟಿಸತಕ್ಕದ್ದು, ಯಾವುದೇ ಬದಲಾವಣೆಗೆ ಕೇಂದ್ರ | ಈ) ಮೇಲಿನಂತೆ ಘಟಕಗಳನ್ನು ರಚಿಸಿ ಅದಕ್ಕೆ ಕೇಂದ್ರ ಅಧ್ಯಕ್ಷರ ಅನುಮತಿ ಪಡೆದು ಅನಂತರ ಪ್ರಕಟಿಸತಕ್ಕದ್ದು, ಯಾವುದೇ ಬದಲಾವಣೆಗೆ ಕೇಂದ್ರ ಅಧ್ಯಕ್ಷರ ಪೂರ್ವಭಾವಿ ಒಪ್ಪಿಗೆ ಪಡೆಯ ತಕ್ಕದ್ದು. | ಈ) ಬದಲಾವಣೆ ಇರುವುದಿಲ್ಲ |

| ಕ್ರ.ಸಂ. | ಹಾಲಿ ಇರುವ ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ | ಕಾರಣ |
|---|---|---|---|
| | ಅಧ್ಯಕ್ಷರ ಪೂರ್ವಭಾವಿ ಒಪ್ಪಿಗೆ ಪಡೆಯ ತಕ್ಕದ್ದು. | | |
| | ಉ) ಯಾವುದೇ ಕಾರಣಕ್ಕೆ ಅವರ ಪರಿಷತ್ ಸದಸ್ಯತ್ವ ರದ್ದಾದರೆ ಜಿಲ್ಲಾ ಘಟಕದ ಸದಸ್ಯತ್ವವೂ ರದ್ದಾಗುತ್ತದೆ. ಜಿಲ್ಲಾ ಘಟಕಗಳಿಗೆ ನೇಮಕವಾಗುವ ಕಾಲದಲ್ಲಿ ಹಾಗೆ ನೇಮಕವಾಗುವವರು ಪರಿಷತ್ತಿನ ಸದಸ್ಯರಾಗಿರತಕ್ಕದ್ದು. | ಉ) ಯಾವುದೇ ಕಾರಣಕ್ಕೆ ಅವರ ಪರಿಷತ್ ಸದಸ್ಯತ್ವ ರದ್ದಾದರೆ ಜಿಲ್ಲಾ ಘಟಕದ ಸದಸ್ಯತ್ವವೂ ರದ್ದಾಗುತ್ತದೆ. ಜಿಲ್ಲಾ ಘಟಕಗಳಿಗೆ ನೇಮಕವಾಗುವ ಕಾಲದಲ್ಲಿ ಹಾಗೆ ನೇಮಕವಾಗುವವರು ಪರಿಷತ್ತಿನ ಸದಸ್ಯರಾಗಿರ ತಕ್ಕದ್ದು. | ಉ) ಬದಲಾವಣೆ ಇರುವುದಿಲ್ಲ |
| | ಊ) ಜಿಲ್ಲಾ ಸಮಿತಿಯ ಕಾರ್ಯಸ್ಥಳವು ಸಾಧ್ಯವಾದಷ್ಟು ಜಿಲ್ಲಾ ಕೇಂದ್ರವೇ ಆಗಿರ ತಕ್ಕದ್ದು. | ಊ) ಜಿಲ್ಲಾ ಸಮಿತಿಯ ಕಾರ್ಯಸ್ಥಳವು ಸಾಧ್ಯವಾದಷ್ಟು ಜಿಲ್ಲಾ ಕೇಂದ್ರವೇ ಆಗಿರತಕ್ಕದ್ದು. | ಊ) ಬದಲಾವಣೆ ಇರುವುದಿಲ್ಲ |
| | ಋ) ಜಿಲ್ಲಾ ಘಟಕಗಳು – ಹಣಕಾಸು, ಆಸ್ತಿ, ಠೇವಣಿ, ಕಾರ್ಯಕ್ರಮಗಳು ಮೊದಲಾದ ವಿಷಯಗಳಲ್ಲಿ ಪರಿಷತ್ತಿನ ನೀತಿ ನಿರ್ದೇಶನಕ್ಕೆ ಒಳಪಟ್ಟಿರಬೇಕು. | ಋ) ಜಿಲ್ಲಾ ಘಟಕಗಳು – ಹಣಕಾಸು, ಆಸ್ತಿ, ಠೇವಣಿ, ಕಾರ್ಯಕ್ರಮಗಳು ಮೊದಲಾದ ವಿಷಯಗಳಲ್ಲಿ ಪರಿಷತ್ತಿನ ನೀತಿ ನಿರ್ದೇಶನಕ್ಕೆ ಒಳಪಟ್ಟಿರಬೇಕು. | ಋ) ಬದಲಾವಣೆ ಇರುವುದಿಲ್ಲ |
| | ೠ) ಜಿಲ್ಲಾ ಘಟಕಗಳು ಅವುಗಳ ವ್ಯಾಪ್ತಿಯಲ್ಲಿ ನಡೆಸಲಾಗುವ ಕಾರ್ಯಕ್ರಮಗಳ ವರದಿಯನ್ನು ಪರಿಷತ್ತಿನ ಕೇಂದ್ರ ಕಛೇರಿಗೆ ಕ್ರಮವಾಗಿ ಕಳುಹಿಸತಕ್ಕದ್ದು. ಲೆಕ್ಕ ಪತ್ರದ ವಿವರ ಗಳನ್ನು ಮೂರು ತಿಂಗಳಿಗೊಂದಾವರ್ತಿ ಕಳುಹಿಸುವು ದಲ್ಲದೆ ಮಾರ್ಚ್ ತಿಂಗಳಾದ ಮೇಲೆ ಚಾರ್ಟರ್ಡ್ ಅಕೌಂಟಂಟ್‌ರಿಂದ ಆಡಿಟ್ ಮಾಡಿಸಿ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರ ಸಭೆ ಕರೆದು, ಆ ಸಮಿತಿಯಿಂದ ಲೆಕ್ಕಪತ್ರಗಳಿಗೆ ಒಪ್ಪಿಗೆ ಪಡೆದು ಆಡಿಟ್ ರಿಪೋರ್ಟ್ ಮತ್ತು ಓಚರುಗಳ ಸಹಿತವಾದ ವರ್ಷದ ಲೆಕ್ಕಗಳನ್ನು ಆಯಾ ವರ್ಷದ ಮೇ ತಿಂಗಳ ಕೊನೆ ಯೊಳಗಾಗಿ ಪರಿಷತ್ತಿಗೆ ಕಳುಹಿಸಬೇಕು. | ೠ) ಜಿಲ್ಲಾ ಘಟಕಗಳು ಅವುಗಳ ವ್ಯಾಪ್ತಿಯಲ್ಲಿ ನಡೆಸಲಾಗುವ ಕಾರ್ಯಕ್ರಮಗಳ ವರದಿಯನ್ನು ಪರಿಷತ್ತಿನ ಕೇಂದ್ರ ಕಛೇರಿಗೆ ಕ್ರಮವಾಗಿ ಕಳುಹಿಸತಕ್ಕದ್ದು. ಲೆಕ್ಕ ಪತ್ರದ ವಿವರಗಳನ್ನು ಮೂರು ತಿಂಗಳಿ ಗೊಂದಾವರ್ತಿ ಕಳುಹಿಸುವುದಲ್ಲದೆ ಮಾರ್ಚ್ ತಿಂಗಳಾದ ಮೇಲೆ ಚಾರ್ಟರ್ಡ್ ಅಕೌಂಟಂಟ್‌ರಿಂದ ಆಡಿಟ್ ಮಾಡಿಸಿ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರ ಸಭೆ ಕರೆದು, ಆ ಸಮಿತಿಯಿಂದ ಲೆಕ್ಕಪತ್ರಗಳಿಗೆ ಒಪ್ಪಿಗೆ ಪಡೆದು ಆಡಿಟ್ ರಿಪೋರ್ಟ್ ಮತ್ತು ಓಚರುಗಳ ಸಹಿತವಾದ ವರ್ಷದ ಲೆಕ್ಕಗಳನ್ನು ಆಯಾ ವರ್ಷದ ಮೇ ತಿಂಗಳ ಕೊನೆಯೊಳ ಗಾಗಿ ಪರಿಷತ್ತಿಗೆ ಕಳುಹಿಸಬೇಕು. | ೠ) ಬದಲಾವಣೆ ಇರುವುದಿಲ್ಲ |
| ೮. | **ನಿಬಂಧನೆ – ೧೫ :** **ತಾಲ್ಲೂಕು / ಕ್ಷೇತ್ರ ಘಟಕಗಳು** | **ನಿಬಂಧನೆ – ೧೫ :** **ತಾಲ್ಲೂಕು / ಕ್ಷೇತ್ರ ಘಟಕಗಳು** | |
| | (ಅ) ಜಿಲ್ಲಾ ಘಟಕದ ಅಧ್ಯಕ್ಷರು ಪ್ರತಿ ತಾಲ್ಲೂಕುಗಳಲ್ಲಿ / ಕ್ಷೇತ್ರಗಳಲ್ಲಿ ಆಯಾ ತಾಲ್ಲೂಕಿನ ಸದಸ್ಯರೊಡನೆ ಸಮಾಲೋಚಿಸಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಘಟಕವನ್ನು ರಚಿಸತಕ್ಕದ್ದು. ಘಟಕದ | (ಅ) ಜಿಲ್ಲಾ ಘಟಕದ ಅಧ್ಯಕ್ಷರು ಪ್ರತಿ ತಾಲ್ಲೂಕುಗಳಲ್ಲಿ / ಕ್ಷೇತ್ರಗಳಲ್ಲಿ ಆಯಾ ತಾಲ್ಲೂಕಿನ ಸದಸ್ಯರೊಡನೆ ಸಮಾಲೋಚಿಸಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಘಟಕವನ್ನು ರಚಿಸತಕ್ಕದ್ದು. ಘಟಕದ | ಅ) ಬದಲಾವಣೆ ಇರುವುದಿಲ್ಲ |

| ಕ್ರ.ಸಂ. | ಹಾಲಿ ಇರುವ ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ | ಕಾರಣ |
|---|---|---|---|
| | ಕಾರ್ಯಕಾರಿ ಸಮಿತಿ ಈ ಕೆಳಕಂಡಂತಿರ ತಕ್ಕದ್ದು.<br>(ಆ) ಅಧ್ಯಕ್ಷರು ೧<br>ಗೌರವ ಕಾರ್ಯದರ್ಶಿಗಳು ೨<br>ಗೌರವ ಕೋಶಾಧ್ಯಕ್ಷರು ೧<br>ಪರಿಶಿಷ್ಟ ಜಾತಿ ಪ್ರತಿನಿಧಿ ೧<br>ಮಹಿಳಾ ಪ್ರತಿನಿಧಿ ೧<br>ಸಂಘ ಸಂಸ್ಥೆಗಳ ಪ್ರತಿನಿಧಿ ೧<br>ತಾಲ್ಲೂಕು ಶಿಕ್ಷಣಾಧಿಕಾರಿಗಳು ೧<br>ನಿಕಟಪೂರ್ವ ಅಧ್ಯಕ್ಷರು ೧<br>ಇತರ ಸದಸ್ಯರು ೬ | ಕಾರ್ಯಕಾರಿ ಸಮಿತಿ ಈ ಕೆಳಕಂಡಂತಿರ ತಕ್ಕದ್ದು.<br>(ಆ) ಅಧ್ಯಕ್ಷರು ೧<br>ಗೌರವ ಕಾರ್ಯದರ್ಶಿಗಳು ೨<br>ಗೌರವ ಕೋಶಾಧ್ಯಕ್ಷರು ೧<br>ಪರಿಶಿಷ್ಟ ಜಾತಿ ಪ್ರತಿನಿಧಿ ೨<br>ಪರಿಶಿಷ್ಟ ಪಂಗಡ ಪ್ರತಿನಿಧಿ ೧<br>ಮಹಿಳಾ ಸಾಹಿತಿ ೨<br>ಸಂಘ ಸಂಸ್ಥೆಗಳ ಪ್ರತಿನಿಧಿ ೧<br>ತಾಲ್ಲೂಕು ಶಿಕ್ಷಣಾಧಿಕಾರಿಗಳು ೧<br>ನಿಕಟಪೂರ್ವ ಅಧ್ಯಕ್ಷರು ೧<br>ಇತರ ಸದಸ್ಯರು ೬ | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಹೆಚ್ಚಿನ ಪ್ರಾತಿನಿಧ್ಯ ನೀಡುವ ಸಲುವಾಗಿ ಪರಿಶಿಷ್ಟ ಜಾತಿ ಪ್ರತಿನಿಧಿಯನ್ನು ಒಂದರಿಂದ ೨ಕ್ಕೆ ಏರಿಸಲಾಗಿದೆ. ಪರಿಶಿಷ್ಟ ಪಂಗಡಕ್ಕೆ ಒಂದು ಪ್ರತಿನಿಧಿಯನ್ನು ಸೇರಿಸುವುದು ಅವಶ್ಯಕವಾಗಿದೆ.<br>ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡುವ ಸಲುವಾಗಿ ಒಂದರಿಂದ ೨ಕ್ಕೆ ಏರಿಸಲಾಗಿದೆ. |
| | (ಇ) ಇತರ ಸದಸ್ಯರನ್ನು ನಾಮಕರಣ ಮಾಡಿಕೊಳ್ಳುವಾಗ ಸಾಹಿತ್ಯ ಸಾಂಸ್ಕೃತಿಕ ಕ್ಷೇತ್ರಕ್ಕೆ ಹಾಗೂ ಪ್ರಾದೇಶಿಕ ಗಡಿ ಪ್ರದೇಶಕ್ಕೆ ಪ್ರಾತಿನಿಧ್ಯ ಸಿಗುವಂತೆ ನೋಡಿಕೊಳ್ಳಬೇಕು. | (ಇ) ಇತರ ಸದಸ್ಯರನ್ನು ನಾಮಕರಣ ಮಾಡಿ ಕೊಳ್ಳುವಾಗ ಸಾಹಿತ್ಯ ಸಾಂಸ್ಕೃತಿಕ ಕ್ಷೇತ್ರಕ್ಕೆ ಹಾಗೂ ಪ್ರಾದೇಶಿಕ ಗಡಿ ಪ್ರದೇಶಕ್ಕೆ ಪ್ರಾತಿನಿಧ್ಯ ಸಿಗುವಂತೆ ನೋಡಿಕೊಳ್ಳಬೇಕು. | ಇ) ಬದಲಾವಣೆ ಇರುವುದಿಲ್ಲ |
| | (ಈ) ಕಾರ್ಯಕಾರಿ ಸಮಿತಿಯ ಸದಸ್ಯರು ಪರಿಷತ್ತಿನ ಸದಸ್ಯರಾಗಿರ ಬೇಕು. | (ಈ) ಕಾರ್ಯಕಾರಿ ಸಮಿತಿಯ ಸದಸ್ಯರು ಪರಿಷತ್ತಿನ ಸದಸ್ಯರಾಗಿರ ಬೇಕು. | ಈ) ಬದಲಾವಣೆ ಇರುವುದಿಲ್ಲ |
| | (ಉ) ಲೆಕ್ಕಪತ್ರ, ಕಾರ್ಯಕ್ರಮಗಳು ಇತ್ಯಾದಿ ವಿಚಾರಗಳಿಗೆ ಜಿಲ್ಲಾ ಘಟಕದ ನಿಯಮಗಳೇ ತಾಲ್ಲೂಕು ಘಟಕಗಳಿಗೂ ಅನ್ವಯಿಸುತ್ತವೆ. | (ಉ) ಲೆಕ್ಕಪತ್ರ, ಕಾರ್ಯಕ್ರಮಗಳು ಇತ್ಯಾದಿ ವಿಚಾರಗಳಿಗೆ ಜಿಲ್ಲಾ ಘಟಕದ ನಿಯಮಗಳೇ ತಾಲ್ಲೂಕು ಘಟಕಗಳಿಗೂ ಅನ್ವಯಿಸುತ್ತವೆ. | ಉ) ಬದಲಾವಣೆ ಇರುವುದಿಲ್ಲ |
| ೯. | **ನಿಬಂಧನೆ – ೧೬ : ಗಡಿನಾಡ ಘಟಕಗಳು**<br>ಅ) ಗಡಿನಾಡ ಘಟಕಗಳಲ್ಲಿ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಗೋವಾ, ಮಹಾರಾಷ್ಟ್ರ ಈ ರಾಜ್ಯಗಳಲ್ಲಿ ಕನಿಷ್ಠ ೧೦೦ (ಒಂದು ನೂರು) ಮಂದಿ ಪರಿಷತ್ ಆಜೀವ ಸದಸ್ಯರಿದ್ದರೆ ಅಲ್ಲಿ ಗಡಿನಾಡ ಘಟಕಗಳನ್ನು ರಚಿಸತಕ್ಕದ್ದು. ಇಂತಹ ಗಡಿನಾಡ ಘಟಕ ಒಂದು ರಾಜ್ಯಕ್ಕೆ ಒಂದೇ ಇರತಕ್ಕದ್ದು. ಗಡಿನಾಡ ಘಟಕದ ಅಧ್ಯಕ್ಷರನ್ನು ಆಯಾ ಘಟಕದ ಸದಸ್ಯರು ಅಂಚೆ ಮೂಲಕ ಮತ ಚಲಾಯಿಸಿ ಆಯ್ಕೆ ಮಾಡತಕ್ಕದ್ದು. ಲೆಕ್ಕಪತ್ರ ಕಾರ್ಯಕ್ರಮಗಳು ಇತ್ಯಾದಿ ವಿಚಾರಗಳಿಗೆ ಜಿಲ್ಲಾ ಘಟಕದ ನಿಯಮಗಳೇ ಇದಕ್ಕೂ ಅನ್ವಯಿಸುತ್ತವೆ. | **ನಿಬಂಧನೆ – ೧೬ : ಗಡಿನಾಡ ಘಟಕಗಳು**<br>ಅ) ಗಡಿನಾಡ ಘಟಕಗಳಲ್ಲಿ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಗೋವಾ, ಮಹಾರಾಷ್ಟ್ರ ಮತ್ತು ತೆಲಂಗಾಣ ಈ ರಾಜ್ಯಗಳಲ್ಲಿ ಕನಿಷ್ಠ ೧೦೦ (ಒಂದು ನೂರು) ಮಂದಿ ಪರಿಷತ್ ಆಜೀವ ಸದಸ್ಯರಿದ್ದರೆ ಅಲ್ಲಿ ಗಡಿನಾಡ ಘಟಕಗಳನ್ನು ರಚಿಸತಕ್ಕದ್ದು. ಇಂತಹ ಗಡಿನಾಡ ಘಟಕ ಒಂದು ರಾಜ್ಯಕ್ಕೆ ಒಂದೇ ಇರತಕ್ಕದ್ದು. ಗಡಿನಾಡ ಘಟಕದ ಅಧ್ಯಕ್ಷರನ್ನು ಆಯಾ ಘಟಕದ ಸದಸ್ಯರು ಅಂಚೆ ಮೂಲಕ ಮತ ಚಲಾಯಿಸಿ ಆಯ್ಕೆ ಮಾಡತಕ್ಕದ್ದು. ಲೆಕ್ಕಪತ್ರ ಕಾರ್ಯಕ್ರಮಗಳು ಇತ್ಯಾದಿ ವಿಚಾರಗಳಿಗೆ ಜಿಲ್ಲಾ ಘಟಕದ ನಿಯಮಗಳೇ ಇದಕ್ಕೂ ಅನ್ವಯಿಸುತ್ತವೆ. ಉಳಿದಂತೆ ಗಡಿನಾಡ ಘಟಕಗಳ ಉಪ ನಿಬಂಧನೆಗಳನ್ನು ಅನುಸರಿಸತಕ್ಕದ್ದು. | ಅ) ಹೊಸದಾಗಿ ತೆಲಂಗಾಣ ರಾಜ್ಯ ಸ್ಥಾಪಿತ ವಾಗಿರುವುದರಿಂದ ಆ ರಾಜ್ಯವನ್ನು ಸೇರಿಸಲಾಗಿದೆ. |

| ಕ್ರ.ಸಂ. | ಹಾಲಿ ಇರುವ ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ | ಕಾರಣ |
|---|---|---|---|
| | ಉಳಿದಂತೆ ಗಡಿನಾಡ ಘಟಕಗಳ ಉಪ ನಿಬಂಧನೆಗಳನ್ನು ಅನುಸರಿಸ ತಕ್ಕದ್ದು.<br>ಆ) ಭಾರತದ ಇತರ ರಾಜ್ಯಗಳಲ್ಲಿ ೫೦೦ ಮಂದಿ ಪರಿಷತ್ ಆಜೀವ ಸದಸ್ಯರಿದ್ದರೆ ಆಯಾ ರಾಜ್ಯಗಳಲ್ಲಿ ಹೊರನಾಡ ವಿಶೇಷ ಘಟಕ ತೆರೆಯಬಹುದು. ಇಂತಹ ಘಟಕ ಒಂದು ರಾಜ್ಯಕ್ಕೆ ಒಂದೇ ಇರತಕ್ಕದ್ದು. | ಆ) ಭಾರತದ ಇತರ ರಾಜ್ಯಗಳಲ್ಲಿ ೫೦೦ ಮಂದಿ ಪರಿಷತ್ ಆಜೀವ ಸದಸ್ಯರಿದ್ದರೆ ಆಯಾ ರಾಜ್ಯಗಳಲ್ಲಿ ಹೊರನಾಡ ವಿಶೇಷ ಘಟಕ ತೆರೆಯಬಹುದು. ಇಂತಹ ಘಟಕ ಒಂದು ರಾಜ್ಯಕ್ಕೆ ಒಂದೇ ಇರತಕ್ಕದ್ದು. | ಆ) ಬದಲಾವಣೆ ಇರುವುದಿಲ್ಲ |
| ೧೦. | **ನಿಬಂಧನೆ –೧೮ : ಕಾರ್ಯಕಾರಿ ಸಮಿತಿ ಅಧ್ಯಕ್ಷರ ಮತ್ತು ಸದಸ್ಯರ ಆಯ್ಕೆ**<br>ಅ) ಪರಿಷತ್ತಿನ ಅಧ್ಯಕ್ಷರನ್ನು ಪರಿಷತ್ತಿನ ಮತದಾರರ ಪಟ್ಟಿಯಲ್ಲಿರುವ ಎಲ್ಲ ಸದಸ್ಯರೂ ಚುನಾಯಿಸತಕ್ಕದ್ದು. ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ ನಿಲ್ಲುವವರು ಕನ್ನಡ ಬಲ್ಲವರಾಗಿದ್ದು, ಚುನಾವಣಾ ತಾರೀಖಿಗೆ ಹತ್ತು ವರ್ಷ ಹಿಂದಿನಿಂದ ಸತತವಾಗಿ ಪರಿಷತ್ತಿನ ಸದಸ್ಯರಾಗಿರ ತಕ್ಕದ್ದು. ಅಧ್ಯಕ್ಷತೆಗೆ ನಿಲ್ಲುವವರು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳಲ್ಲಿ ಸಾಕಷ್ಟು ಸೇವೆ ಮಾಡಿರುವವರಾಗಿರ ತಕ್ಕದ್ದು.<br>ಆ) ಪರಿಷತ್ತಿನ ಅಧ್ಯಕ್ಷರ ಅಧಿಕಾರಾವಧಿ ಮೂರು ವರ್ಷ ಮಾತ್ರ ಇರತಕ್ಕದ್ದು. ಒಂದು ಸಾರಿ ಅಧ್ಯಕ್ಷರಾಗಿ ಚುನಾಯಿತ ರಾದವರು ಮುಂದಿನ ಅವಧಿಯ ಚುನಾವಣೆಗೆ ಸ್ಪರ್ಧಿಸುವಂತಿಲ್ಲ. ಆದರೆ ಮುಂದಿನ ಅವಧಿ ಕಳೆದ ನಂತರ ಮತ್ತೆ ಅವರು ಸ್ಪರ್ಧಿಸುವುದಕ್ಕೆ ಅವಕಾಶವಿರ ತಕ್ಕದ್ದು (ಒಂದು ಅವಧಿಯಲ್ಲಿ ಯಾವುದೇ ಕಾರಣದಿಂದ ಅಧ್ಯಕ್ಷ ಸ್ಥಾನ ತೆರಪಾದರೂ ಅದು ಅವರ ಪೂರ್ಣ ಅವಧಿಯೆಂದೇ ಅರ್ಥ). ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಕೋಶಾಧ್ಯಕ್ಷರು ತಮ್ಮ ಅಧಿಕಾರಾವಧಿಯಲ್ಲಿ ಬೆಂಗಳೂರಿ ನಲ್ಲಿಯೇ ವಾಸಿಸಬೇಕು. | **ನಿಬಂಧನೆ –೧೮ : ಕಾರ್ಯಕಾರಿ ಸಮಿತಿ ಅಧ್ಯಕ್ಷರ ಮತ್ತು ಸದಸ್ಯರ ಆಯ್ಕೆ**<br>ಅ) ಪರಿಷತ್ತಿನ ಅಧ್ಯಕ್ಷರನ್ನು ಪರಿಷತ್ತಿನ ಮತದಾರರ ಪಟ್ಟಿಯಲ್ಲಿರುವ ಎಲ್ಲ ಸದಸ್ಯರೂ ಚುನಾಯಿಸತಕ್ಕದ್ದು. ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ ನಿಲ್ಲುವವರು ಕನ್ನಡ ಬಲ್ಲವರಾಗಿದ್ದು, ಚುನಾವಣಾ ತಾರೀಖಿಗೆ ಹತ್ತು ವರ್ಷ ಹಿಂದಿನಿಂದ ಸತತವಾಗಿ ಪರಿಷತ್ತಿನ ಸದಸ್ಯರಾಗಿರತಕ್ಕದ್ದು. ಅಧ್ಯಕ್ಷತೆಗೆ ನಿಲ್ಲುವವರು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳಲ್ಲಿ ಸಾಕಷ್ಟು ಸೇವೆ ಮಾಡಿರುವವ ರಾಗಿರತಕ್ಕದ್ದು.<br>ಆ) ಪರಿಷತ್ತಿನ ಅಧ್ಯಕ್ಷರ ಅಧಿಕಾರಾವಧಿ ಐದು ವರ್ಷ ಮಾತ್ರ ಇರತಕ್ಕದ್ದು. ಒಂದು ಸಾರಿ ಅಧ್ಯಕ್ಷರಾಗಿ ಚುನಾಯಿತರಾದವರು ಮುಂದಿನ ಅವಧಿಯ ಚುನಾವಣೆಗೆ ಸ್ಪರ್ಧಿಸುವಂತಿಲ್ಲ. ಆದರೆ ಮುಂದಿನ ಅವಧಿ ಕಳೆದ ನಂತರ ಮತ್ತೆ ಅವರು ಸ್ಪರ್ಧಿಸುವುದಕ್ಕೆ ಅವಕಾಶವಿರ ತಕ್ಕದ್ದು (ಒಂದು ಅವಧಿಯಲ್ಲಿ ಯಾವುದೇ ಕಾರಣದಿಂದ ಅಧ್ಯಕ್ಷ ಸ್ಥಾನ ತೆರಪಾದರೂ ಅದು ಅವರ ಪೂರ್ಣ ಅವಧಿಯೆಂದೇ ಅರ್ಥ). ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಕೋಶಾಧ್ಯಕ್ಷರು ತಮ್ಮ ಅಧಿಕಾರಾವಧಿಯಲ್ಲಿ ಬೆಂಗಳೂರಿ ನಲ್ಲಿಯೇ ವಾಸಿಸಬೇಕು. | ಅ) ಬದಲಾವಣೆ ಇರುವುದಿಲ್ಲ<br>ಆ) ಲೋಕಸಭೆ, ವಿಧಾನಸಭೆ, ವಿಧಾನ ಪರಿಷತ್, ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯ್ತಿಗಳು, ಸಹಕಾರ ಸಂಘಗಳ ಅಧಿಕಾರ ಅವಧಿ ಐದು ವರ್ಷಗಳಿವೆ. ಸಾಹಿತ್ಯ ಪರಿಷತ್ತಿನಲ್ಲೂ ಐದು ವರ್ಷ ಗಳಿದ್ದಲ್ಲಿ ಹಮ್ಮಿಕೊಳ್ಳುವ ಕಾರ್ಯ ಚಟುವಟಿಕೆ ಗಳನ್ನು ಕಾರ್ಯರೂಪಕ್ಕೆ ತರಲು ಅನುಕೂಲ ವಾಗುವುದು. ಅಲ್ಲದೇ ಚುನಾವಣಾ ವೆಚ್ಚವನ್ನು ೩ ವರ್ಷದ ಬದಲಾಗಿ ೫ ವರ್ಷಕ್ಕೆ ಮಾಡುವುದ ರಿಂದ ಸಾರ್ವಜನಿಕರ ಹಣ ಅನವಶ್ಯಕವಾಗಿ ಖರ್ಚಾಗುವುದು ತಪ್ಪುತ್ತದೆ. ಚುನಾವಣೆ ತಯಾರಿ ಹಾಗೂ ಚುನಾವಣೆ ಪ್ರಕ್ರಿಯೆ ಮುಗಿಯುವವರೆಗೆ ಹಲವಾರು ಸಿಬ್ಬಂದಿಗಳು ಈ ಕೆಲಸ ನಿರ್ವಹಿಸುತ್ತಿದ್ದು, ೩ ವರ್ಷದಿಂದ ೫ ವರ್ಷಕ್ಕೆ ಅವಧಿ ಹೆಚ್ಚಿಸುವುದ ರಿಂದ ಹೆಚ್ಚುವರಿ ಶ್ರಮವೂ |

| ಕ್ರ.ಸಂ. | ಹಾಲಿ ಇರುವ ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ | ಕಾರಣ |
|---|---|---|---|
| | | | ಆಗುವುದಿಲ್ಲ. ಅಧ್ಯಕ್ಷರು ರಾಜ್ಯದಲ್ಲಿ ಪ್ರವಾಸ ಕೈಗೊಂಡಾಗ ಹಲವಾರು ಜಿಲ್ಲೆಯಲ್ಲಿ ಹಾಗೂ ಗ್ರಾಮೀಣ ಭಾಗದ ಜನರೂ ಕೂಡ ಈ ಬದಲಾವಣೆಯನ್ನು ಬಯಸಿರುವುದರಿಂದ ಅವಧಿಯನ್ನು ಮೂರು ವರ್ಷದಿಂದ ಐದು ವರ್ಷಗಳಿಗೆ ಹೆಚ್ಚಿಸಬಹುದು. |
| | ಇ) ಯಾವ ಕಾರಣದಿಂದಲಾದರೂ ಕಾರ್ಯಕಾರಿ ಸಮಿತಿ ಚುನಾವಣೆ ತಡವಾದರೆ ಮುಂದೆ ಚುನಾವಣೆ ನಡೆಯುವವರೆಗೆ ಹಿಂದಿನ ಕಾರ್ಯಕಾರಿ ಸಮಿತಿಯೇ ಪರಿಷತ್ತಿನ ಕಾರ್ಯ ಗಳನ್ನು ನಿರ್ವಹಿಸತಕ್ಕದ್ದು. ಈ ರೀತಿ ಮುಂದುವರಿದ ಅವಧಿ ಆರು ತಿಂಗಳುಗಳಿಗೆ ಮೀರತಕ್ಕದ್ದಲ್ಲ. | ಇ) ಯಾವ ಕಾರಣದಿಂದಲಾದರೂ ಕಾರ್ಯಕಾರಿ ಸಮಿತಿ ಚುನಾವಣೆ ತಡವಾದರೆ ಮುಂದೆ ಚುನಾವಣೆ ನಡೆಯುವವರೆಗೆ ಹಿಂದಿನ ಕಾರ್ಯಕಾರಿ ಸಮಿತಿಯೇ ಪರಿಷತ್ತಿನ ಕಾರ್ಯಗಳನ್ನು ನಿರ್ವಹಿಸತಕ್ಕದ್ದು. ಈ ರೀತಿ ಮುಂದುವರಿದ ಅವಧಿ ಆರು ತಿಂಗಳುಗಳಿಗೆ ಮೀರತಕ್ಕದ್ದಲ್ಲ. | ಇ) ಬದಲಾವಣೆ ಇರುವುದಿಲ್ಲ |
| | ಈ) ಯಾವ ಕಾರಣದಿಂದಲಾದರೂ ಅಧ್ಯಕ್ಷ ಸ್ಥಾನ ತೆರವಾದಾಗ ಇನ್ನುಳಿದ ಅವಧಿಯವರೆಗೆ ಪರಿಷತ್ತಿನ ಕಾರ್ಯಕಾರಿ ಸಮಿತಿ, ಕಾರ್ಯಕಾರಿ ಸಮಿತಿಯ ಚುನಾಯಿತ ಸದಸ್ಯರಲ್ಲಿ ಯಾರನ್ನಾದರೂ ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸತಕ್ಕದ್ದು. | ಈ) ಯಾವ ಕಾರಣದಿಂದಲಾದರೂ ಅಧ್ಯಕ್ಷ ಸ್ಥಾನ ತೆರವಾದಾಗ ಇನ್ನುಳಿದ ಅವಧಿಯವರೆಗೆ ಪರಿಷತ್ತಿನ ಕಾರ್ಯಕಾರಿ ಸಮಿತಿ, ಕಾರ್ಯಕಾರಿ ಸಮಿತಿಯ ಚುನಾಯಿತ ಸದಸ್ಯರಲ್ಲಿ ಯಾರನ್ನಾದರೂ ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸತಕ್ಕದ್ದು. | ಈ) ಬದಲಾವಣೆ ಇರುವುದಿಲ್ಲ |
| | ಉ) ಅಧ್ಯಕ್ಷರು, ಕಾರ್ಯಕಾರಿ ಸಮಿತಿಯ ಗಮನಕ್ಕೆ ತರುವುದರ ಮೂಲಕ ತಾತ್ಕಾಲಿಕವಾಗಿ (ಆರು ತಿಂಗಳಿಗೆ ಕಡಿಮೆಯಿಲ್ಲದೆ ಒಂದು ವರ್ಷಕ್ಕೆ ಹೆಚ್ಚಾಗದ ಅವಧಿಯಲ್ಲಿ) ಕಾರ್ಯ ನಿರ್ವಹಿಸಲು ಸಾಧ್ಯವಾಗದಿದ್ದಲ್ಲಿ ಆ ಕಾಲ ಪರ್ಯಂತ ಕಾರ್ಯಕಾರಿ ಸಮಿತಿಯ ಸದಸ್ಯರಲ್ಲಿ ಒಬ್ಬರಿಗೆ ಆ ಅಧಿಕಾರನ್ನು ವಹಿಸಿಕೊಡಲು ಅಧ್ಯಕ್ಷರಿಗೆ ಅಧಿಕಾರವಿರುತ್ತದೆ. | ಉ) ಅಧ್ಯಕ್ಷರು, ಕಾರ್ಯಕಾರಿ ಸಮಿತಿಯ ಗಮನಕ್ಕೆ ತರುವುದರ ಮೂಲಕ ತಾತ್ಕಾಲಿಕವಾಗಿ (ಆರು ತಿಂಗಳಿಗೆ ಕಡಿಮೆಯಿಲ್ಲದೆ ಒಂದು ವರ್ಷಕ್ಕೆ ಹೆಚ್ಚಾಗದ ಅವಧಿಯಲ್ಲಿ) ಕಾರ್ಯ ನಿರ್ವಹಿಸಲು ಸಾಧ್ಯವಾಗದಿದ್ದಲ್ಲಿ ಆ ಕಾಲ ಪರ್ಯಂತ ಕಾರ್ಯಕಾರಿ ಸಮಿತಿಯ ಸದಸ್ಯರಲ್ಲಿ ಒಬ್ಬರಿಗೆ ಆ ಅಧಿಕಾರನ್ನು ವಹಿಸಿ ಕೊಡಲು ಅಧ್ಯಕ್ಷರಿಗೆ ಅಧಿಕಾರವಿರುತ್ತದೆ. | ಉ) ಬದಲಾವಣೆ ಇರುವುದಿಲ್ಲ |
| | ಊ) ಒಂದು ವರ್ಷಕ್ಕೆ ಮೀರಿ ಅಧ್ಯಕ್ಷರು ಗೈರು ಹಾಜರಾಗುವುದಾದರೆ ಆ ಸ್ಥಾನ ತೆರಪಾಗಿದೆ ಎಂದೇ ಪರಿಗಣಿಸತಕ್ಕದ್ದು. | ಊ) ಒಂದು ವರ್ಷಕ್ಕೆ ಮೀರಿ ಅಧ್ಯಕ್ಷರು ಗೈರು ಹಾಜರಾಗುವುದಾದರೆ ಆ ಸ್ಥಾನ ತೆರಪಾಗಿದೆ ಎಂದೇ ಪರಿಗಣಿಸತಕ್ಕದ್ದು. | ಊ) ಬದಲಾವಣೆ ಇರುವುದಿಲ್ಲ |

| ಕ್ರ.ಸಂ. | ಹಾಲಿ ಇರುವ ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ | ಕಾರಣ |
|---|---|---|---|
| ೧೧. | **ನಿಬಂಧನೆ – ೩೯ :**<br>**ಚುನಾವಣಾ ಉಪನಿಬಂಧನೆಗಳು** | **ನಿಬಂಧನೆ – ೩೯ :**<br>**ಚುನಾವಣಾ ಉಪನಿಬಂಧನೆಗಳು** | |
| | ಅ) ಅಸ್ತಿತ್ವದಲ್ಲಿರುವ ಕಾರ್ಯಕಾರಿ ಸಮಿತಿಯ ನಿರ್ದಿಷ್ಟ ಅವಧಿಯು ಮುಗಿಯುವುದಕ್ಕೆ ಮೂರು ತಿಂಗಳು ಮುಂಚಿತವಾಗಿ ಮುಂದಿನ ಕಾರ್ಯಕಾರಿ ಸಮಿತಿಯ ಚುನಾವಣೆಗೆ ಏರ್ಪಾಟುಗಳನ್ನು ನಡೆಸತಕ್ಕದ್ದು. | ಅ) ಅಸ್ತಿತ್ವದಲ್ಲಿರುವ ಕಾರ್ಯಕಾರಿ ಸಮಿತಿಯ ನಿರ್ದಿಷ್ಟ ಅವಧಿಯು ಮುಗಿಯುವುದಕ್ಕೆ ಮೂರು ತಿಂಗಳು ಮುಂಚಿತವಾಗಿ ಮುಂದಿನ ಕಾರ್ಯಕಾರಿ ಸಮಿತಿಯ ಚುನಾವಣೆಗೆ ಏರ್ಪಾಟುಗಳನ್ನು ನಡೆಸ ತಕ್ಕದ್ದು. | ಅ) ಬದಲಾವಣೆ ಇರುವುದಿಲ್ಲ |
| | ಆ) ಚುನಾವಣೆಗೆ ಮೂರು ತಿಂಗಳ ಮೊದಲೇ ಅಸಿಸ್ಟಂಟ್ ಕಮಿಷನರ್ ಹುದ್ದೆಗೆ ಕಡಿಮೆ ಅಲ್ಲದ ಅಧಿಕಾರಿ ಯನ್ನು ಚುನಾವಣಾಧಿಕಾರಿಯಾಗಿ ನೇಮಿಸು ವಂತೆ ಸರ್ಕಾರವನ್ನು ವಿನಂತಿಸಿ ಕೊಳ್ಳತಕ್ಕದ್ದು, ಅವರು ಕಾನೂನು ಬಲ್ಲವರಾಗಿರಬೇಕು. ಹಾಗೂ ಅವರು ನಡೆಸುವ ಪರಿಷತ್ತಿನ ಚುನಾವಣೆಯ ಯಾವ ಅಧಿಕಾರ ಸ್ಥಾನಗಳಿಗೂ ಅಭ್ಯರ್ಥಿಯಾಗಿ ನಿಲ್ಲತಕ್ಕದ್ದಲ್ಲ. ಸದಸ್ಯ ರಾಗಿದ್ದರೆ ಮತದಾನ ಮಾಡಬಹುದು. | ಆ) ಚುನಾವಣೆಗೆ ಮೂರು ತಿಂಗಳ ಮೊದಲೇ ಅಸಿಸ್ಟಂಟ್ ಕಮಿಷನರ್ ಹುದ್ದೆಗೆ ಕಡಿಮೆ ಅಲ್ಲದ ಅಧಿಕಾರಿಯನ್ನು ಚುನಾವಣಾಧಿಕಾರಿ ಯಾಗಿ ನೇಮಿಸುವಂತೆ ಸರ್ಕಾರವನ್ನು ವಿನಂತಿಸಿಕೊಳ್ಳತಕ್ಕದ್ದು, ಅವರು ಕಾನೂನು ಬಲ್ಲವರಾಗಿರಬೇಕು. ಹಾಗೂ ಅವರು ನಡೆಸುವ ಪರಿಷತ್ತಿನ ಚುನಾವಣೆಯ ಯಾವ ಅಧಿಕಾರ ಸ್ಥಾನಗಳಿಗೂ ಅಭ್ಯರ್ಥಿಯಾಗಿ ನಿಲ್ಲತಕ್ಕದ್ದಲ್ಲ. ಸದಸ್ಯರಾಗಿದ್ದರೆ ಮತದಾನ ಮಾಡಬಹುದು. | ಆ) ಬದಲಾವಣೆ ಇರುವುದಿಲ್ಲ |
| | ಇ) ಚುನಾವಣಾಧಿಕಾರಿಯು ಈ ಕೆಳಗಿನ ನಿಯಮಕ್ಕನುಸರಿಸಿ ಚುನಾವಣಾ ಕಾರ್ಯಗಳನ್ನು ನಡೆಸಬೇಕು. | ಇ) ಚುನಾವಣಾಧಿಕಾರಿಯು ಈ ಕೆಳಗಿನ ನಿಯಮಕ್ಕನುಸರಿಸಿ ಚುನಾವಣಾ ಕಾರ್ಯ ಗಳನ್ನು ನಡೆಸಬೇಕು. | ಇ) ಬದಲಾವಣೆ ಇರುವುದಿಲ್ಲ |
| | ಈ) ಚುನಾವಣಾ ದಿನಾಂಕ ನಿಗದಿಗೊಳಿಸಿ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಬೇಕು. ಚುನಾವಣಾ ನಡೆಯುವ ೭೫ ದಿನಗಳ ಮೊದಲು ಸದಸ್ಯರ ಪಟ್ಟಿಯನ್ನು ಜಿಲ್ಲಾ ವಿಭಾಗ ಗಳಾಗಿ ವಿಂಗಡಿಸಿ ಕೇಂದ್ರ ಪರಿಷತ್ತಿನ ಕಛೇರಿ ಯಲ್ಲಿಯೂ, ಜಿಲ್ಲಾ / ಗಡಿನಾಡ ಘಟಕಗಳಲ್ಲಿಯೂ ಪ್ರಕಟಿಸತಕ್ಕದ್ದು. | ಈ) ಚುನಾವಣಾ ದಿನಾಂಕ ನಿಗದಿಗೊಳಿಸಿ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಬೇಕು. ಚುನಾವಣಾ ನಡೆಯುವ ೯೦ ದಿನಗಳ ಮೊದಲು ಮತದಾರರ ಪಟ್ಟಿಯನ್ನು ಜಿಲ್ಲಾ ವಿಭಾಗಗಳಾಗಿ ವಿಂಗಡಿಸಿ ಕೇಂದ್ರ ಪರಿಷತ್ತಿನ ಕಛೇರಿಯಲ್ಲಿಯೂ, ಜಿಲ್ಲಾ / ಗಡಿನಾಡ ಘಟಕಗಳಲ್ಲಿಯೂ ಪ್ರಕಟಿಸತಕ್ಕದ್ದು. | ಈ) ಮತದಾರರ ಪಟ್ಟಿಯನ್ನು ಪ್ರಕಟಿಸಲು ಸಾಕಷ್ಟು ಕಾಲಾವಕಾಶ ನೀಡಬೇಕಾಗಿರುವುದರಿಂದ ೭೫ ದಿನಗಳಿಂದ ೯೦ ದಿನಗಳವರೆಗೆ ಏರಿಸಲಾಗಿದೆ. |
| | ಉ) ಚುನಾವಣಾ ಮತಪಟ್ಟಿಯ ಬಗ್ಗೆ ಯಾರದಾದರೂ ಆಕ್ಷೇಪಣೆ ಇದ್ದರೆ ಅಂಥವುಗಳನ್ನು ಎರಡುವಾರ ಅವಕಾಶ ಕೊಟ್ಟು ಸ್ವೀಕರಿಸಿ ೪೫ ದಿನಗಳ ಮೊದಲು ಮತದಾರರ ಅಂತಿಮ ಪಟ್ಟಿಯನ್ನು ಪರಿಷತ್ತಿನಲ್ಲಿ ಪ್ರಕಟಿಸತಕ್ಕದ್ದು. | ಉ) ಚುನಾವಣಾ ಮತಪಟ್ಟಿಯ ಬಗ್ಗೆ ಯಾರದಾದರೂ ಆಕ್ಷೇಪಣೆ ಇದ್ದರೆ ಅಂಥವು ಗಳನ್ನು ಎರಡುವಾರ ಅವಕಾಶಕೊಟ್ಟು ಸ್ವೀಕರಿಸಿ ೪೫ ದಿನಗಳ ಮೊದಲು ಮತದಾರರ ಅಂತಿಮ ಪಟ್ಟಿಯನ್ನು ಪರಿಷತ್ತಿನಲ್ಲಿ ಪ್ರಕಟಿಸತಕ್ಕದ್ದು. | ಉ) ಬದಲಾವಣೆ ಇರುವುದಿಲ್ಲ |
| | ಊ) ನಾಮಪತ್ರಗಳ ಸ್ವೀಕಾರದ ಕೊನೆಯ ದಿವಸವನ್ನು ಪ್ರಕಟಿಸಬೇಕು. | ಊ) ನಾಮಪತ್ರಗಳ ಸ್ವೀಕಾರದ ಕೊನೆಯ ದಿವಸವನ್ನು ಪ್ರಕಟಿಸಬೇಕು. | ಊ) ಬದಲಾವಣೆ ಇರುವುದಿಲ್ಲ |

| ಕ್ರ.ಸಂ. | ಹಾಲಿ ಇರುವ ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ | ಕಾರಣ |
|---|---|---|---|
| | ಋ) ನಾಮಪತ್ರಗಳ ಸ್ವೀಕಾರದ ದಿವಸಕ್ಕೂ ಚುನಾವಣೆ ನಡೆಯುವ ದಿನಕ್ಕೂ ಕನಿಷ್ಠ ೩೦ ದಿವಸಗಳ ಅಂತರ ವಾದರೂ ಇರಬೇಕು. | ಋ) ನಾಮಪತ್ರಗಳ ಸ್ವೀಕಾರದ ದಿವಸಕ್ಕೂ ಚುನಾವಣೆ ನಡೆಯುವ ದಿನಕ್ಕೂ ಕನಿಷ್ಠ ೩೦ ದಿವಸಗಳ ಅಂತರವಾದರೂ ಇರಬೇಕು. | ಋ) ಬದಲಾವಣೆ ಇರುವುದಿಲ್ಲ |
| | ೠ) ನಾಮಪತ್ರಗಳ ಸ್ವೀಕಾರದ ಕೊನೆಯ ದಿನದಿಂದ ಮೂರು ದಿವಸಗಳೊಳಗಾಗಿ ಅವುಗಳ ಪರಿಶೀಲನೆ ನಡೆಯಬೇಕು. | ೠ) ನಾಮಪತ್ರಗಳ ಸ್ವೀಕಾರದ ಕೊನೆಯ ದಿನದಿಂದ ಮೂರು ದಿವಸಗಳೊಳಗಾಗಿ ಅವುಗಳ ಪರಿಶೀಲನೆ ನಡೆಯಬೇಕು. | ೠ) ಬದಲಾವಣೆ ಇರುವುದಿಲ್ಲ |
| | ಎ) ನಾಮಪತ್ರಗಳ ಪರಿಶೀಲನೆಯಾದ ನಂತರ ನಾಮಪತ್ರವನ್ನು ಹಿಂತೆಗೆದು ಕೊಳ್ಳುವುದಕ್ಕೆ ಮೂರು ದಿವಸಗಳ ಅವಧಿಯ ಅವಕಾಶವಿರಬೇಕು. | ಎ) ನಾಮಪತ್ರಗಳ ಪರಿಶೀಲನೆಯಾದ ನಂತರ ನಾಮಪತ್ರವನ್ನು ಹಿಂತೆಗೆದುಕೊಳ್ಳುವುದಕ್ಕೆ ಮೂರು ದಿವಸಗಳ ಅವಧಿಯ ಅವಕಾಶವಿರ ಬೇಕು. | ಎ) ಬದಲಾವಣೆ ಇರುವುದಿಲ್ಲ |
| | ಏ) ಪರಿಶೀಲಿಸಿ ಉಳಿದಿರುವ ಅಂತಿಮ ಸ್ಪರ್ಧಿಗಳ ಹೆಸರನ್ನು ಕನ್ನಡ ವರ್ಣ ಮಾಲೆಯ 'ಅ' ಕಾರಾನುಕ್ರಮವಾಗಿ ಪ್ರಕಟಿಸಬೇಕು. | ಏ) ಪರಿಶೀಲಿಸಿ ಉಳಿದಿರುವ ಅಂತಿಮ ಸ್ಪರ್ಧಿಗಳ ಹೆಸರನ್ನು ಕನ್ನಡ ವರ್ಣಮಾಲೆಯ 'ಅ' ಕಾರಾನುಕ್ರಮವಾಗಿ ಪ್ರಕಟಿಸಬೇಕು. | ಏ) ಬದಲಾವಣೆ ಇರುವುದಿಲ್ಲ |
| | ಐ) ಅಗತ್ಯವಾದಷ್ಟೇ 'ನಾಮಪತ್ರಗಳು' ಬಂದರೆ ಅವರು ಅವಿರೋಧವಾಗಿ ಆಯ್ಕೆಯಾದ ರೆಂದು ಘೋಷಿಸಬೇಕು. | ಐ) ಅಗತ್ಯವಾದಷ್ಟೇ 'ನಾಮಪತ್ರಗಳು' ಬಂದರೆ ಅವರು ಅವಿರೋಧವಾಗಿ ಆಯ್ಕೆಯಾದ ರೆಂದು ಘೋಷಿಸಬೇಕು. | ಐ) ಬದಲಾವಣೆ ಇರುವುದಿಲ್ಲ |
| | ಒ) ಹೊರನಾಡ ಮತದಾರರಿಗೆ ಚುನಾವಣೆ ದಿನಕ್ಕಿಂತ ೧೫ ದಿವಸ ಮುಂಚಿತವಾಗಿ ಮತಪತ್ರಗಳನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ರವಾನಿಸಬೇಕು. | ಒ) ಹೊರನಾಡ ಮತದಾರರಿಗೆ ಚುನಾವಣೆ ದಿನಕ್ಕಿಂತ ೧೫ ದಿವಸ ಮುಂಚಿತವಾಗಿ ಮತಪತ್ರಗಳನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ರವಾನಿಸಬೇಕು. | ಒ) ಬದಲಾವಣೆ ಇರುವುದಿಲ್ಲ |
| | ಓ) ಹೊರನಾಡ ಮತದಾರರು ರಿಜಿಸ್ಟರ್ಡ್ ಅಂಚೆಯ ಮೂಲಕ ಕಳಿಸುವ ಮತಪತ್ರಗಳನ್ನು ಅಧ್ಯಕ್ಷರ ಚುನಾವಣಾ ಫಲಿತಾಂಶ ಪ್ರಕಟಿಸುವ ಒಂದು ದಿನಕ್ಕೆ ಮುಂಚಿತವಾಗಿ ಚುನಾವಣಾಧಿಕಾರಿ ಗಳಿಗೆ ತಲುಪುವಂತೆ ಕಳಿಸತಕ್ಕದ್ದು. | ಓ) ಹೊರನಾಡ ಮತದಾರರು ರಿಜಿಸ್ಟರ್ಡ್ ಅಂಚೆಯ ಮೂಲಕ ಕಳಿಸುವ ಮತಪತ್ರ ಗಳನ್ನು ಅಧ್ಯಕ್ಷರ ಚುನಾವಣಾ ಫಲಿತಾಂಶ ಪ್ರಕಟಿಸುವ ಒಂದು ದಿನಕ್ಕೆ ಮುಂಚಿತವಾಗಿ ಚುನಾವಣಾಧಿಕಾರಿ ಗಳಿಗೆ ತಲುಪುವಂತೆ ಕಳಿಸತಕ್ಕದ್ದು. | ಓ) ಬದಲಾವಣೆ ಇರುವುದಿಲ್ಲ |
| ೧೨. | ನಿಬಂಧನೆ – ೪೦ | ನಿಬಂಧನೆ – ೪೦ | |
| | ಅ) ಸದಸ್ಯರ ಪಟ್ಟಿಯನ್ನೂ ಉಮೇದು ವಾರಿಕೆಯ ಅಪೇಕ್ಷಾ ಪತ್ರಗಳನ್ನೂ ನಿಗದಿತ ಬೆಲೆಗೆ ಮಾರತಕ್ಕದ್ದು. | ಅ) ಸದಸ್ಯರ ಪಟ್ಟಿಯನ್ನೂ ಉಮೇದುವಾರಿಕೆಯ ಅಪೇಕ್ಷಾ ಪತ್ರಗಳನ್ನೂ ನಿಗದಿತ ಬೆಲೆಗೆ ಮಾರತಕ್ಕದ್ದು. | ಅ) ಬದಲಾವಣೆ ಇರುವುದಿಲ್ಲ |
| | ಆ) ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ೧೦೦ ಜನ ಮತದಾರರಿರುವ ತಾಲ್ಲೂಕು ಕೇಂದ್ರಗಳಲ್ಲಿಯೂ ಮತದಾನ ಕೇಂದ್ರ ವಿರತಕ್ಕದ್ದು. ಕಡಿಮೆ ಮತದಾರರಿದ್ದಲ್ಲಿ ಹೆಚ್ಚಿರುವ ಪಕ್ಕದ ತಾಲ್ಲೂಕಿನ ಮತದಾರರ ಪಟ್ಟಿಗೆ ಅವರ | ಆ) ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ಹಾಲಿ ಹೋಬಳಿ ಮಟ್ಟದಲ್ಲಿರುವ ಮತಕೇಂದ್ರಗಳಲ್ಲಿಯೂ ಮತದಾನ ಕೇಂದ್ರವಿರತಕ್ಕದ್ದು. ಇನ್ನಿತರ ಸ್ಥಳಗಳಲ್ಲಿ ಕನಿಷ್ಠ ೫೦೦ ಮತದಾರರಿದ್ದಲ್ಲಿ ಹೊಸದಾಗಿ ಮತಕೇಂದ್ರವನ್ನು ಸ್ಥಾಪಿಸಬೇಕು. | ಆ) ಚುನಾವಣೆಯಂದು ಬೆಂಗಳೂರಿನ ಮತದಾರರು ಸುಮಾರು ೨೫–೩೦ ಕಿ.ಮೀ. ದೂರದಿಂದ ನ್ಯಾಷನಲ್ ಕಾಲೇಜ್‌ಗೆ ಬಂದು ಮತ ಹಾಕಲು |

| ಕ್ರ.ಸಂ. | ಹಾಲಿ ಇರುವ ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ | ಕಾರಣ |
|---|---|---|---|
| | ಹೆಸರು ಗಳನ್ನು ಸೇರಿಸಿ ಅವರಿಗೆ ಅಲ್ಲಿ ಮತದಾನ ಮಾಡಲು ಅವಕಾಶ ಕಲ್ಪಿಸತಕ್ಕದ್ದು. ಹೀಗೆ ಸೇರಿಸಲಾದ ಮತದಾರರ ಒಟ್ಟು ಸಂಖ್ಯೆ ೧೦೦ ಅಥವಾ ಅದಕ್ಕಿಂತ ಹೆಚ್ಚಿರಬೇಕು. | ಬೆಂಗಳೂರು ನಗರ ಜಿಲ್ಲೆಯಲ್ಲಿ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಮತಕೇಂದ್ರವನ್ನು ಸ್ಥಾಪಿಸತಕ್ಕದ್ದು. | ಸಾಕಷ್ಟು ಕಷ್ಟ ಪಡಬೇಕು. ಈ ಅನಾನುಕೂಲತೆ ಯಿಂದಾಗಿ ಶೇಕಡವಾರು ಮತದಾನ ಕನಿಷ್ಠವಾಗುತ್ತಿದೆ. ಈ ದೃಷ್ಟಿ ಯಿಂದ ಮತದಾರರು ವಾಸಿಸುವ ವಿಧಾನಸಭಾ ಕ್ಷೇತ್ರದಲ್ಲಿಯೇ ಮತಕೇಂದ್ರ ವನ್ನು ಸ್ಥಾಪಿಸಲು ತಿದ್ದುಪಡಿ ಪ್ರಸ್ತಾಪಿಸಲಾಗಿದೆ. |
| | ಇ) ಚುನಾವಣೆ ನಡೆದ ದಿನವೇ ಆಯಾ ಸ್ಥಳದಲ್ಲಿ ಮತಗಳ ಎಣಿಕೆ ನಡೆಯ ತಕ್ಕದ್ದು. ಜಿಲ್ಲಾ ಘಟಕಗಳ ಅಧ್ಯಕ್ಷರುಗಳ ಚುನಾವಣಾ ಫಲಿತಾಂಶವನ್ನು ಸ್ಥಳದಲ್ಲಿಯೇ ಪ್ರಕಟಿಸತಕ್ಕದ್ದು. ಪರಿಷತ್ತಿನ ಅಧ್ಯಕ್ಷರ ಚುನಾವಣೆಗೆ ಸಂಬಂಧಪಟ್ಟ ಮತಪತ್ರಗಳ ಎಣಿಕೆ ಮಾಡಿ ಅಭ್ಯರ್ಥಿಗಳು ಕ್ರಮವಾಗಿ ಪಡೆದ ಮತಗಳ ಸಂಖ್ಯೆಯನ್ನು ಅಧಿಕೃತ ಪತ್ರದಲ್ಲಿ ನಮೂದಿಸಿ ಆ ಪತ್ರವನ್ನೂ ಮತ್ತು ಎಣಿಕೆಯಾದ ಮತಪತ್ರಗಳನ್ನೂ ಪರಿಷತ್ತಿಗೆ ತಂದು ಚುನಾವಣಾಧಿಕಾರಿಗೆ ತಲುಪಿಸತಕ್ಕದ್ದು. ಚುನಾವಣಾ ತಾರೀಖಿನಿಂದ ಮೂರನೇ ದಿವಸದಂದು ಎಲ್ಲ ಜಿಲ್ಲೆಗಳಿಂದ ತಂದ, ಅಭ್ಯರ್ಥಿಗಳು ಪಡೆದ ಮತಗಳನ್ನೂ ಅಂಚೆಯ ಮೂಲಕ ಬಂದ ಮತ ಗಳನ್ನೂ ಒಟ್ಟು ಎಣಿಕೆಮಾಡಿ ಅಧ್ಯಕ್ಷರ ಫಲಿತಾಂಶ ವನ್ನು ಪ್ರಕಟಿಸತಕ್ಕದ್ದು. | ಇ) ಚುನಾವಣೆ ನಡೆದ ದಿನವೇ ಆಯಾ ಸ್ಥಳದಲ್ಲಿ ಮತಗಳ ಎಣಿಕೆ ನಡೆಯತಕ್ಕದ್ದು. ಜಿಲ್ಲಾ ಘಟಕಗಳ ಅಧ್ಯಕ್ಷರುಗಳ ಚುನಾವಣಾ ಫಲಿತಾಂಶವನ್ನು ಸ್ಥಳದಲ್ಲಿಯೇ ಪ್ರಕಟಿಸ ತಕ್ಕದ್ದು. ಪರಿಷತ್ತಿನ ಅಧ್ಯಕ್ಷರ ಚುನಾವಣೆಗೆ ಸಂಬಂಧಪಟ್ಟ ಮತಪತ್ರಗಳ ಎಣಿಕೆ ಮಾಡಿ ಅಭ್ಯರ್ಥಿಗಳು ಕ್ರಮವಾಗಿ ಪಡೆದ ಮತಗಳ ಸಂಖ್ಯೆಯನ್ನು ಅಧಿಕೃತ ಪತ್ರದಲ್ಲಿ ನಮೂದಿಸಿ ಆ ಪತ್ರವನ್ನೂ ಮತ್ತು ಎಣಿಕೆಯಾದ ಮತಪತ್ರಗಳನ್ನೂ ಪರಿಷತ್ತಿಗೆ ತಂದು ಚುನಾವಣಾಧಿಕಾರಿಗೆ ತಲುಪಿಸ ತಕ್ಕದ್ದು. ಚುನಾವಣಾ ತಾರೀಖಿನಿಂದ ಮೂರನೇ ದಿವಸದಂದು ಎಲ್ಲ ಜಿಲ್ಲೆಗಳಿಂದ ತಂದ, ಅಭ್ಯರ್ಥಿಗಳು ಪಡೆದ ಮತಗಳನ್ನೂ ಅಂಚೆಯ ಮೂಲಕ ಬಂದ ಮತಗಳನ್ನೂ ಒಟ್ಟು ಎಣಿಕೆಮಾಡಿ ಅಧ್ಯಕ್ಷರ ಫಲಿತಾಂಶ ವನ್ನು ಪ್ರಕಟಿಸತಕ್ಕದ್ದು. | ಇ) ಬದಲಾವಣೆ ಇರುವುದಿಲ್ಲ |
| | ಈ) ಯಾವುದಾದರೂ ಕಾರಣಕ್ಕಾಗಿ ಯಾವುದೇ ಸ್ಥಳದಲ್ಲಿ ಚುನಾವಣೆ ನಡೆಯದೆ ಹೋದರೆ ಅಂತಹ ಸ್ಥಳಗಳ ಚುನಾವಣೆಯನ್ನು ಬಿಟ್ಟು ಉಳಿದ ಸ್ಥಳಗಳ ಮತಗಳ ಎಣಿಕೆ ನಡೆಸಿ ಸ್ಪರ್ಧಿಗಳು ಪಡೆದ ಮತಗಳನ್ನು ಪ್ರಕಟಿಸತಕ್ಕದ್ದು. ಆದರೆ ಪರಿಷತ್ತಿನ ಅಧ್ಯಕ್ಷರ ಆಯ್ಕೆಯ ಘೋಷಣೆಯನ್ನು ನಿಂತ ಸ್ಥಳದ ಚುನಾವಣೆ ನಡೆಯುವ ವರೆಗೆ ತಡೆ ಹಿಡಿಯತಕ್ಕದ್ದು. | ಈ) ಯಾವುದಾದರೂ ಕಾರಣಕ್ಕಾಗಿ ಯಾವುದೇ ಸ್ಥಳದಲ್ಲಿ ಚುನಾವಣೆ ನಡೆಯದೆ ಹೋದರೆ ಅಂತಹ ಸ್ಥಳಗಳ ಚುನಾವಣೆಯನ್ನು ಬಿಟ್ಟು ಉಳಿದ ಸ್ಥಳಗಳ ಮತಗಳ ಎಣಿಕೆ ನಡೆಸಿ ಸ್ಪರ್ಧಿಗಳು ಪಡೆದ ಮತಗಳನ್ನು ಪ್ರಕಟಿಸ ತಕ್ಕದ್ದು. ಆದರೆ ಪರಿಷತ್ತಿನ ಅಧ್ಯಕ್ಷರ ಆಯ್ಕೆಯ ಘೋಷಣೆಯನ್ನು ನಿಂತ ಸ್ಥಳದ ಚುನಾವಣೆ ನಡೆಯುವವರೆಗೆ ತಡೆ ಹಿಡಿಯತಕ್ಕದ್ದು. | ಈ) ಬದಲಾವಣೆ ಇರುವುದಿಲ್ಲ |
| | ಉ) ಚುನಾವಣಾ ನಿಂತ ಸ್ಥಳದಲ್ಲಿ ಮತ್ತೆ ಹತ್ತು ದಿನದೊಳಗಾಗಿ ಚುನಾವಣೆ ನಡೆಯತಕ್ಕದ್ದು. | ಉ) ಚುನಾವಣಾ ನಿಂತ ಸ್ಥಳದಲ್ಲಿ ಮತ್ತೆ ಹತ್ತು ದಿನದೊಳಗಾಗಿ ಚುನಾವಣೆ ನಡೆಯತಕ್ಕದ್ದು. | ಉ) ಬದಲಾವಣೆ ಇರುವುದಿಲ್ಲ |

| ಕ್ರ.ಸಂ. | ಹಾಲಿ ಇರುವ ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ | ಕಾರಣ |
|---|---|---|---|
| | ಊ) ಚುನಾವಣೆ ನಿಂತ ಸ್ಥಳದಲ್ಲಿ ಮರು ಚುನಾವಣೆ ನಡೆದ ಮೂರು ದಿನಗಳಲ್ಲಿ ಪರಿಷತ್ತಿನ ಅಧ್ಯಕ್ಷರ ಫಲಿತಾಂಶವನ್ನು ಘೋಷಿಸತಕ್ಕದ್ದು. | ಊ) ಚುನಾವಣೆ ನಿಂತ ಸ್ಥಳದಲ್ಲಿ ಮರು ಚುನಾವಣೆ ನಡೆದ ಮೂರು ದಿನಗಳಲ್ಲಿ ಪರಿಷತ್ತಿನ ಅಧ್ಯಕ್ಷರ ಫಲಿತಾಂಶವನ್ನು ಘೋಷಿಸತಕ್ಕದ್ದು. | ಊ) ಬದಲಾವಣೆ ಇರುವುದಿಲ್ಲ |
| | ಋ) ಪರಿಷತ್ತಿನ ಚುನಾಯಿತ ಸ್ಥಾನಕ್ಕೆ ಮತ ನೀಡುವವರು ಚುನಾವಣಾ ತಾರೀಖಿಗೆ ಮೂರು ವರ್ಷ ಹಿಂದಿನಿಂದ ಸತತ ವಾಗಿ ಪರಿಷತ್ತಿನ ಸದಸ್ಯರಾಗಿರತಕ್ಕದ್ದು. | ಋ) ಪರಿಷತ್ತಿನ ಚುನಾಯಿತ ಸ್ಥಾನಕ್ಕೆ ಮತ ನೀಡುವವರು ಚುನಾವಣಾ ತಾರೀಖಿಗೆ ಮೂರು ವರ್ಷ ಹಿಂದಿನಿಂದ ಸತತವಾಗಿ ಪರಿಷತ್ತಿನ ಸದಸ್ಯರಾಗಿರತಕ್ಕದ್ದು. | ಋ) ಬದಲಾವಣೆ ಇರುವುದಿಲ್ಲ |
| | ೠ)ಪರಿಷತ್ತಿನ ಜಿಲ್ಲಾ ಘಟಕಗಳ ಗಡಿನಾಡ ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸು ವವರು ಐದು ವರ್ಷ ಹಿಂದಿನಿಂದ ಸತತವಾಗಿ ಪರಿಷತ್ತಿನ ಸದಸ್ಯರಾಗಿರ ತಕ್ಕದ್ದು. | ೠ)ಪರಿಷತ್ತಿನ ಜಿಲ್ಲಾ ಘಟಕಗಳ ಗಡಿನಾಡ ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವವರು ಐದು ವರ್ಷ ಹಿಂದಿನಿಂದ ಸತತವಾಗಿ ಪರಿಷತ್ತಿನ ಸದಸ್ಯರಾಗಿರತಕ್ಕದ್ದು. | ೠ) ಬದಲಾವಣೆ ಇರುವುದಿಲ್ಲ |
| | ಎ) ಪರಿಷತ್ತಿನ ಬಾಕಿ ಉಳಿಸಿಕೊಂಡಿರು ವವರು ಹಾಗೂ ಕೋರ್ಟಿನಿಂದ ಶಿಕ್ಷೆಗೆ ಒಳಗಾದವರು ಚುನಾವಣೆಗೆ ನಿಲ್ಲಲು ಅರ್ಹರಾಗಿರುವುದಿಲ್ಲ. | ಎ) ಪರಿಷತ್ತಿನ ಬಾಕಿ ಉಳಿಸಿಕೊಂಡಿರುವವರು ಹಾಗೂ ಕೋರ್ಟಿನಿಂದ ಶಿಕ್ಷೆಗೆ ಒಳಗಾದವರು ಚುನಾವಣೆಗೆ ನಿಲ್ಲಲು ಅರ್ಹರಾಗಿರುವುದಿಲ್ಲ. | ಎ) ಬದಲಾವಣೆ ಇರುವುದಿಲ್ಲ |
| | **ದಿನಾಂಕ ೨೨-೦೧-೨೦೧೮ ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ಕೆಳಕಂಡ ನಿರ್ಣಯಗಳನ್ನು ಒಮ್ಮತದಿಂದ ಕೈಗೊಳ್ಳಲಾಗಿದೆ.** | | |
| ೧೩. | **ನಿಬಂಧನೆ – ೧೧, ೧೪(ಅ), ೧೫(ಅ)** | ಪರಿಷತ್ತಿನ ಕಾರ್ಯಕಾರಿ ಸಮಿತಿ, ಜಿಲ್ಲಾ ಘಟಕಗಳು, ತಾಲ್ಲೂಕು / ಕ್ಷೇತ್ರ ಘಟಕಗಳ ಕಾರ್ಯಕಾರಿ ಸಮಿತಿಯಲ್ಲಿ ಪರಿಶಿಷ್ಟ ಜಾತಿ ಪ್ರತಿನಿಧಿಯನ್ನು ಒಂದರಿಂದ ೨ಕ್ಕೆ ಏರಿಸಲಾಗಿದೆ. ಹೊಸದಾಗಿ ಒಂದು ಪರಿಶಿಷ್ಟ ಪಂಗಡ ಪ್ರತಿನಿಧಿಯನ್ನು ಸೇರಿಸಲಾಗಿದೆ. | ಪರಿಶಿಷ್ಟ ಜಾತಿಗೆ ಪ್ರಾತಿನಿಧ್ಯ ಕಡಿಮೆ ಇರುವುದರಿಂದ ಪ್ರತಿನಿಧಿಯನ್ನು ಒಂದರಿಂದ ೨ಕ್ಕೆ ಏರಿಸಲಾಗಿದೆ. ಅಂತೆಯೇ ಪರಿಶಿಷ್ಟ ಪಂಗಡಕ್ಕೂ ಒಂದು ಪ್ರತಿನಿಧಿಯನ್ನು ನೀಡುವುದು ಅವಶ್ಯಕವಾಗಿರುತ್ತದೆ. |
| ೧೪. | | ಮೇಲೆ ಪ್ರಸ್ತಾಪಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ನಿಬಂಧನೆಗಳು ೭, ೮, ೯, ೧೧, ೧೨, ೧೩, ೧೪, ೧೫, ೧೬, ೧೮, ೩೯, ೪೦ ಇವುಗಳ ತಿದ್ದುಪಡಿಗಳು ಹಾಲಿ ಇರುವ ಕಾರ್ಯಕಾರಿ ಸಮಿತಿಯ ಆಡಳಿತಾವಧಿಗೂ ಅನ್ವಯಿಸುತ್ತವೆ. | ಆಯಾ ನಿಬಂಧನೆಗಳ ತಿದ್ದುಪಡಿಗೆ ಮೇಲೆ ವಿವರಿಸಿದ ಕಾರಣಗಳಿಂದಾಗಿ ಈ ತಿದ್ದುಪಡಿಗಳು ಹಾಲಿ ಕಾರ್ಯಕಾರಿ ಸಮಿತಿಯ ಆಡಳಿತಾವಧಿಗೆ ಅನ್ವಯವಾಗುವುದು ಅತ್ಯವಶ್ಯಕವಾಗಿರುತ್ತವೆ. |

* * *